# ಕೆ.ಎ.ಎಸ್.ಪೂರ್ವಬಾವಿ ಪರೀಕ್ಷೆ-2011

## ಸಾಮಾನ್ಯ ಅಧ್ಯಯನ (ಪತ್ರಿಕೆ-1)

1.ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಿಕೆಯಾಗಿರುವಂಥವನ್ನು ಗುರುತಿಸಿ

a. ಎಸ್ಕಿಮೊ-ಕೆನಡಾ

b. ಒರಾನ್-ನಾರ್ವೆ

c. ಲ್ಯಾಪ್ಸ್-ಭಾರತ

d. ಗೊಂಡರು-ಆಫ್ರಿಕಾ

(1) a ಮತ್ತು b

(2) a ಮಾತ್ರ

(3) b ಮತ್ತು c

(4) d ಮಾತ್ರ

(ಉತ್ತರ:-4)

2. ಈ ಕೆಳಗಿನವುಗಳಲ್ಲಿ ಹಿಮಾಲಯಕ್ಕಿಂತ ಪ್ರಾಚೀನವಾದವು ಯಾವುವು

a. ಸಂಧೂ

b. ಗಂಗಾ

c. ಬ್ರಹ್ಮಪುತ್ರ

d. ಸಟ್ಲೆಜ್

(1) a,b ಮತ್ತು c ಮಾತ್ರ

(2) b, c ಮತ್ತು d ಮಾತ್ರ

(3) a, b ಮತ್ತು d ಮಾತ್ರ

(4) a. c ಮತ್ತು d ಮಾತ್ರ

(ಉತ್ತರ:-4)

3. ಭೂಮಿಯ ಮೇಲಿನ ಒಂದು ನಿರ್ದಿಷ್ಟ ಸ್ಥಳದಿಂದ ನಾವು ಸೂರ್ಯಗ್ರಹಣಕ್ಕಿಂತ ಚಂದ್ರಗ್ರಹಣವನ್ನು ಹೆಚ್ಚು ಸಂಖ್ಯೆಯಲ್ಲಿ ಕಾಣುತ್ತೇವೆ. ಇದಕ್ಕೆ ಕಾರಣವೇನು

(1) ಒಂದು ವರ್ಷದಲ್ಲಿ ಸಂಭವಿಸುವ ಚಂದ್ರಗ್ರಹಣಗಳ ಸಂಖ್ಯೆಯು ಸೂರ್ಯಗ್ರಹಣಗಳಿಗಿಂತ ಹೆಚ್ಚಾಗಿರುತ್ತದೆ

(2) ಎಲ್ಲಾ ಚಂದ್ರಗ್ರಹಣಗಳು ಗೋಳಾರ್ಧದಾದ್ಯಂತ ಕಂಡುಬರುತ್ತವೆ, ಆದರೆ
ಎಲ್ಲಾ ಸೂರ್ಯಗ್ರಹಣಗಳು ಹೀಗೆ ಕಾಣುವುದಿಲ್ಲ

(3) ಚಂದ್ರಗ್ರಹಣಗಳು ಸೂರ್ಯಗ್ರಹಣಗಳಿಗಿಂತ ಹೆಚ್ಚು ಪ್ರಕಟಿತವಾಗಿರುತ್ತವೆ

(4) ಚಂದ್ರಗ್ರಹಣಗಳು ಯಾವಾಗಲೂ ಪೂರ್ಣವಾಗಿರುತ್ತವೆ ಆದರೆ ಸೂರ್ಯಗ್ರಹಣಗಳು ಸಾಮಾನ್ಯವಾಗಿ ಭಾಗಶಃ

(ಉತ್ತರ:-2)

4. ಕರ್ನಾಟಕದ ಕೃಷಿ ಇಲಾಖೆಯು ರಾಜ್ಯದಲ್ಲಿ ಪ್ರಮುಖ ಕೃಷಿ-ಹವಾಮಾನೀಯ ಪ್ರದೇಶಗಳನ್ನು ಗುರುತಿಸಿದೆ. ಇದು ಈ ಕೆಳಕಂಡ ಅಂಶವನ್ನು ಆಧರಿಸಿದೆ

a. ಮಳೆಯಾಗುವ ಸ್ವರೂಪ, ಮೊತ್ತ ಹಾಗೂ ವಿತರಣೆ ಸೇರಿದಂತೆ
b. ಮಣ್ಣಿನ ವಿಧಗಳು ಮತ್ತು ಉಬ್ಬು ಲಕ್ಷಣಗಳು
c. ಬೆಳೆಯಲಾಗುವ ಬೆಳೆಗಳು ಮತ್ತು ಮಾರಾಟ ವ್ಯವಸ್ಥೆ
d. ಕೂಲಿ ಮತ್ತು ಸಾಗಾಣಿಕೆ ಸೌಲಭ್ಯ

ಕೆಳಕಂಡ ಸಂಕೇತಗಳನ್ನು ಬಳಸಿ ಸರಿ ಉತ್ತರಗಳನ್ನು ಆಯ್ಕೆಮಾಡಿ

(1) a, b ಮತ್ತು c ಮಾತ್ರ

(2) b, c ಮತ್ತು d ಮಾತ್ರ

(3) a, c ಮತ್ತು d ಮಾತ್ರ

(4) a, b ಮತ್ತು d ಮಾತ್ರ

(ಉತ್ತರ:-1)

5. ಮೆರಿಡಿಯನ್ ನೊಂದಿಗೆ ನಾವು ಭೂಮಧ್ಯೆ ರೇಖೆಯಿಂದ ಧ್ರುವಗಳ ಕಡೆಗೆ

ಚಲಿಸುತ್ತದ್ದಂತೆ ಕಾಣುವ ಪರಿಣಾಮ ಹೀಗಿರುತ್ತದೆ

a. ಸಸ್ಯ ಮತ್ತು ಪ್ರಾಣಿಗಳ ವೈವಿಧ್ಯತೆ ಹೆಚ್ಚಾಗತೊಡಗುವುದು

b. ಸಸ್ಯ ಮತ್ತು ಪ್ರಾಣಿಗಳ ವೈವಿಧ್ಯತೆ ಕಡಿಮೆಯಾಗತೊಡಗುವುದು

c. ಉಷ್ಣಾಂಶ ಹೆಚ್ಚಾಗುತ್ತದೆ

d. ಉಷ್ಣಾಂಶ ಕಡೆಮೆಯಾಗುತ್ತದೆ

(1) a ಮತ್ತು b ಮಾತ್ರ

(2) b ಮತ್ತು c ಮಾತ್ರ

(3) a ಮತ್ತು c ಮಾತ್ರ

(4) b ಮತ್ತು d ಮಾತ್ರ

(ಉತ್ತರ:-4)

6. ಭಾರತದ ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನದ ಅಧ್ಯಕ್ಷತೆ ವಹಿಸುವವರು

(1) ಭಾರತದ ರಾಷ್ಟ್ರಪತಿ

(2) ರಾಜ್ಯಸಭೆಯ ಸಭಾಪತಿ

(3) ಲೋಕಸಭೆಯ ಸ್ಪೀಕರ್

(4) ಸಂಸತ್ತಿನ ಎರಡೂ ಸದನಗಳ ಸದಸ್ಯರ ಬಹುಮತದಿಂದ ಇದೇ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಆಯ್ಕೆಯಾದಂಥ ಸಭಾಪತಿ

(ಉತ್ತರ:-3)

7. ಈ ಕೆಳಗಿನ ಯಾವುದು ಭಾರತೀಯ ಸಂಸತ್ತಿನ ಇಲಾಖಾ ಸಂಬಂಧಿತ ಸ್ಥಾಯೀ ಸಮಿತಿಯಾಗಿರುವುದಿಲ್ಲ

(1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕ್ಷೇಮ ಕಲ್ಯಾಣ ಕುರಿತ ಸಮಿತಿ

(2) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕುರಿತ ಸಮಿತಿ

(3) ಕಾರ್ಮಿಕರನ್ನು ಕುರಿತ ಸಮಿತಿ

(4) ಗ್ರಾಮೀಣ ಅಭಿವೃದ್ಧಿ ಕುರಿತ ಸಮಿತಿ

(ಉತ್ತರ:-1)

8. ಸರಿಯಾದ ಹೊಂದಾಣಿಕೆಯನ್ನು ಗುರುತಿಸಿ:

| ವಿಷಯ | | ಆಯೋಗ |
|---|---|---|
| (1) 1984 ಸಿಖ್ ವಿರೋಧಿ ಗಲಭೆಗಳು | --- | ನ್ಯಾಯಮೂರ್ತಿ ಶ್ರೀಕೃಷ್ಣ |
| (2) 1992-93ರ ಮುಂಬೈ ಗಲಭೆಗಳು | --- | ನ್ಯಾಯಮೂರ್ತಿ ನಾನಾವತಿ |
| (3) ಭಾರತೀಯ ಸಂವಿಧಾನದ ಕಾರ್ಯ ನಿರ್ವಹಣೆಯ ಪುನರವಲೋಕನ | --- | ನ್ಯಾಯಮೂರ್ತಿ ವೆಂಕಟಾಚಲಯ್ಯ |
| (4) ತಮಿಳುನಾಡು ಮತ್ತು ಕೇರಳದ ನಡುವೆ ನದಿ ನೀರಿನ ವಿವಾದ | --- | ನ್ಯಾಯಮೂರ್ತಿ ಮಹಾಜನ್ |

(ಉತ್ತರ:-3)

9. ಈ ಕೆಳಗಿನವುಗಳಲ್ಲಿ ಸರಿಯಾದ ವಿವರಣೆ ಯಾವುದು

(1) ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗಾಗಿ 1/3 ಸ್ಥಾನಗಳನ್ನು ಮೀಸಲಿರಿಸುವ ಮಸೂದೆಯು ಲೋಕಸಭೆಯಲ್ಲಿ ಅಂಗೀಕೃತವಾಗಿದ್ದು ರಾಜ್ಯಸಭೆಯ ಅನುಮೋದನೆಗಾಗಿ ಕಾಯುತ್ತಿದೆ

(2) ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗಾಗಿ 1/3 ಸ್ಥಾನಗಳನ್ನು ಮೀಸಲಿರಿಸುವ ಮಸೂದೆಯು ರಾಜ್ಯಸಭೆಯಲ್ಲಿ ಅಂಗೀಕೃತವಾಗಿದ್ದು ಲೋಕಸಭೆಯ ಅನುಮೋದನೆಗಾಗಿ ಕಾಯುತ್ತಿದೆ

(3) ಮಹಿಳೆಯರಿಗಾಗಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ 1/3 ಸ್ಥಾನಗಳನ್ನು ಮೀಸಲಿರಿಸುವ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದೆ

(4) ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಕುರಿತು ಸಂಸತ್ತಿನಲ್ಲಿ ಆದ ಕ್ಷೋಭೆಯಿಂದಾಗಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಈ ಕುರಿತು ಇನ್ನಷ್ಟು ವ್ಯಾಪಕವಾದ ಸಮಾಲೋಚನೆಗಾಗಿ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣದ ಸಮಿತಿಗೆ ಕಳುಹಿಸಿಕೊಡಲಾಗಿದೆ

(ಉತ್ತರ:-2)

10. ಈ ಕೆಳಕಂಡ ಯಾವ ಸ್ವಾತಂತ್ರ್ಯ ಹೋರಾಟಗಾರ್ತಿಯು ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಗ್ರಾಮಗಳು ಮತ್ತು ಗುಡಿಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು

(1) ರಾಜಕುಮಾರಿ ಅಮೃತ್ ಕೌರ್ (2) ಡಾ.ಸುಶೀಲಾ ನಾಯರ್

(3) ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ (4) ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ

(ಉತ್ತರ:-4)

11. ರಾಜ್ಯನೀತಿಯ ನಿರ್ದೇಶಕ ತತ್ವಗಳನ್ನು ಯಾವುದರಲ್ಲಿ ಸೇರಿಸಲಾಗಿದೆ

(1) ಸಂವಿಧಾನದ ಭಾಗ III

(2) ಸಂವಿಧಾನದ ಭಾಗ V

(3) ಸಂವಿಧಾನದ ಭಾಗ IV

(4) ಸಂವಿಧಾನದ ಭಾಗ VI

(ಉತ್ತರ:-3)

12. ಭಾರತದ ರಾಷ್ಟ್ರಪತಿಯವರನ್ನು ಕುರಿತಂತೆ ಈ ಕೆಳಗಿನ ಯಾವ ವಿವರಣೆ ಸರಿಯಾಗಿದೆ

(1) ರಾಷ್ಟ್ರಪತಿಯು ಸಂಸತ್ತಿನ ಭಾಗವಲ್ಲ

(2) ರಾಷ್ಟ್ರಪತಿಯು ಸಂಸತ್ತಿನ ಭಾಗವಾಗಿದ್ದಾರೆ

(3) ರಾಷ್ಟ್ರಪತಿಯು ಒಂದು ಮತದಾರರ ಗಣದಿಂದ ಅಯ್ಕೆಯಾಗಿರುವುದಿಲ್ಲ

(4) ರಾಷ್ಟ್ರಪತಿಯು ಜನರಿಂದ ನೇವರಾಗಿ ಆಯ್ಕೆಯಾಗಿರುತ್ತಾರೆ

(ಉತ್ತರ:-2)

13. ರಾಜ್ಯವೊಂದರಲ್ಲಿ ವಿಧಾನ ಪರಿಷತ್ತನ್ನು ಸೃಷ್ಟಿಸುವ ಅಥವಾ ವಿಸರ್ಜಿಸುವ ಕೆಲಸವನ್ನು

(1) ಸಂಸತ್ತು ಮಾತ್ರ ಮಾಡಬಹುದು

(2) ರಾಜ್ಯ ವಿಧಾನಸಭೆ ಮಾತ್ರ ಮಾಡಬಹುದು

(3) ರಾಜ್ಯ ವಿಧಾನಸಭೆಯ ಶಿಫಾರಸ್ಸಿನ ಮೇರೆಗೆ ಸಂಸತ್ತು ಮಾಡಬಹುದು

(4) ರಾಜ್ಯದ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಯವರು ಮಾಡಬಹುದು

(ಉತ್ತರ:-2)

14. ಈ ಕೆಳಗಿನ ಯಾವ ವಿಷಯವು ಕೇಂದ್ರದ ಸೂಚಿಯಲ್ಲಿ ಸೇರಿರುವುದಿಲ್ಲ

(1) ಪೌರತ್ವ

(2) ಮತ್ಸ್ಯೋದ್ಯಮ

(3) ಅಂಚೆ ಮತ್ತು ತಂತಿ

(4) ಪ್ರತ್ಯರ್ಪಣ

(ಉತ್ತರ:-2)

15. ಭಾರತದ ಸಂವಿಧಾನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ವಿವರಣೆ ಸರಿಯಾಗಿದೆ

(1) ಸಂಸತ್ತಿನಿಂದ ಅಂತರರಾಷ್ಟ್ರೀಯ ಕೌಲು ಹಾಗೂ ಒಡಂಬಡಿಕೆಗಳ ಸ್ಥಿರೀಕರಣಕ್ಕೆ ಭಾರತೀಯ ಸಂವಿಧಾನ ಅವಕಾಶ ನೀಡುತ್ತದೆ

(2) ಸಂಸತ್ತಿನಿಂದ ಅಂತರರಾಷ್ಟ್ರೀಯ ಕೌಲು ಹಾಗೂ ಒಡಂಬಡಿಕೆಗಳ ಸ್ಥಿರೀಕರಣಕ್ಕೆ ಭಾರತೀಯ ಸಂವಿಧಾನ ಅವಕಾಶ ನೀಡುವುದಿಲ್ಲ

(3) ಸಂಸತ್ತಿನಿಂದ ಅಂತರರಾಷ್ಟ್ರೀಯ ಕೌಲು ಹಾಗೂ ಒಡಂಬಡಿಕೆಗಳ ಸ್ಥಿರೀಕರಣಕ್ಕೆ ಭಾರತೀಯ ಸಂವಿಧಾನವು ಕೆಲವು ಸಂದರ್ಭಗಳ ಅಡಿಯಲ್ಲಿ ಮಾತ್ರ ಅವಕಾಶ ನೀಡುತ್ತದೆ

(4) ಸಂಸತ್ತಿನಿಂದ ಅಂತರರಾಷ್ಟ್ರೀಯ ಕೌಲುಗಳ ಸ್ಥಿರೀಕರಣಕ್ಕೆ ಮಾತ್ರ ಅವಕಾಶ ನೀಡಿದೆ, ಒಡಂಬಡಿಕೆಗಳಿಗಲ್ಲ

(ಉತ್ತರ:-2)

16. ಕೆಳಗಿನ ಪಟ್ಟಿ I ನ್ನು (ಸರೋವರಗಳು) ಪಟ್ಟಿ II (ದೇಶಗಳು)ರೊಂದಿಗೆ ಸರಿಹೊಂದಿಸಿ ಹಾಗೂ ಸರಿಯಾದ ಉತ್ತರವನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ:

| ಪಟ್ಟಿ I (ಸರೋವರಗಳು) | | ಪಟ್ಟಿ II (ದೇಶಗಳು) |
|---|---|---|
| A. ತುರ್ಕಾನ ಸರೋವರ (ರುಡಾಲ್ಫ್) | --- | ರಷ್ಯಾ |
| B. ಒನೆಗಾ ಸರೋವರ | --- | ಕೀನ್ಯಾ |
| C. ವಾನೆರ್ನ್ ಸರೋವರ | --- | ಕೆನಡಾ |
| D. ರೈನ್ ಡೀರ್ ಸರೋವರ | --- | ಯು.ಎಸ್.ಎ. |
| E. ಮಿಚಿಗನ್ ಸರೋವರ | --- | ಸ್ವೀಡನ್ |

ಸಂಕೇತಗಳು:

| | A | B | C | D | E |
|---|---|---|---|---|---|
| (1) | 2 | 1 | 5 | 3 | 4 |
| (2) | 4 | 3 | 1 | 2 | 5 |
| (3) | 1 | 2 | 3 | 5 | 4 |
| (4) | 3 | 1 | 4 | 5 | 2 |

(ಉತ್ತರ:-1)

17. ಭಾರತ ಮತ್ತು ಕರ್ನಾಟಕದ ಪ್ರಕೃತಿ ಭೂಗೋಳಕ್ಕೆ ಸಂಬಂಧಿಸಿದಂತೆ ಕೆಳಕಂಡ ವಿವರಣೆಗಳನ್ನು ಪರಿಶೀಲಿಸಿ

a. ಇಂಡೋ-ಗ್ಯಾಂಜೆಟಿಕ್ ಮೈದಾನವು ದಕ್ಷಿಣ ಭಾರತಕ್ಕಿಂತ ಎತ್ತರವಾದ ಸರಾಸರಿ ಉನ್ನತಿಯೊಂದಿಗೆ ಸರ್ವ ಋತು ನದಿಗಳನ್ನು ಹೊಂದಿದೆ

b. ಪಶ್ಚಿಮದಲ್ಲಿ ಹರಿಯುವ ಕರ್ನಾಟಕದ ನದಿಗಳನ್ನು ಗರಿಷ್ಠ ಹರಿವಿನ ಅವುಗಳ ಕೆಳ ವಿಸ್ತಾರದಿಂದ ಪೂರ್ವ ದಿಕ್ಕಿನಲ್ಲಿ ಹರಿಯುವ ನದಿಗಳಿಗೆ ಸಂಪರ್ಕಿಸಬಹುದು

ಸರಿಯಾದ ವಿವರಣೆಯನ್ನು ಸಂಕೇತಗಳಿಂದ ತಿಳಿಸಿ:

(1) a ಮಾತ್ರ ಸರಿ

(2) b ಮಾತ್ರ ಸರಿ

(3) a ಮತ್ತು b ಎರಡೂ ಸರಿ

(4) a ಮತ್ತು b ಎರಡೂ ತಪ್ಪು

(ಉತ್ತರ:-4)

18. ಕೆಳಗಿನ ಪಟ್ಟಿ I ನ್ನು (ಬಂದರು) ಪಟ್ಟಿ II (ರಫ್ತು ಮಾಡುವ ಮುಖ್ಯ ಉತ್ಪನ್ನ)ರೊಂದಿಗೆ ಸರಿಹೊಂದಿಸಿ ಹಾಗೂ ಸರಿಯಾದ ಉತ್ತರವನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ:

| ಪಟ್ಟಿ I (ಬಂದರು ) | | ಪಟ್ಟಿ II (ರಫ್ತು ಮಾಡುವ ಉತ್ಪನ್ನ) |
|---|---|---|
| A. ಟ್ಯೂಟಿಕಾರಿನ್ | --- | ಸಾಂಬಾರ ಪದಾರ್ಥಗಳು |
| B. ಮುಂಬೈ | --- | ಕಬ್ಬಿಣದ ಅದಿರು |
| C. ಗೋವಾ | --- | ಗ್ರಾನೈಟ್ |
| D. ಮಂಗಳೂರು | --- | ಶುದ್ಧೀಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು |
| E. ಕೊಚ್ಚಿನ್ | --- | ರಾಸಾಯನಿಕ ಗೊಬ್ಬರಗಳು |

ಸಂಕೇತಗಳು:

| | A | B | C | D | E |
|---|---|---|---|---|---|
| (1) | 2 | 1 | 5 | 3 | 4 |
| (2) | 5 | 4 | 2 | 3 | 1 |
| (3) | 5 | 4 | 2 | 1 | 3 |
| (4) | 3 | 1 | 5 | 2 | 4 |

(ಉತ್ತರ:-2)

19. ಅರೋರಾ ಬೋರಿಯಾಲಿಸ್ ಎಲ್ಲಿ ಉಂಟಾಗುತ್ತದೆ

(1) ಸ್ಟ್ರ್ಯಾಟೊಸ್ಫಿಯರ್

(2) ಟ್ರೋಪೋಸ್ಫಿಯರ್

(3) ಓಜೋನೋಸ್ಫಿಯರ್

(4) ಅಯನೋಸ್ಫೋಯರ್

(ಉತ್ತರ:-4)

20. ಗಂಗಾ ನದಿಯಿಂದ ರೂಪುಗೊಂಡ ಮುಖಜಭೂಮಿಯು ಈ ಕೆಳಗಿನದಕ್ಕೆ ಉದಾಹರಣೆ

(1) ಆರ್ಕ್ಯುಯೇಟ್ ಮುಖಜಭೂಮಿ

(2) ಅಳಿವೆ ರೂಪದ ಮುಖಜಭೂಮಿ

(3) ಶೃಂಗಾಕೃತಿಯ ಮುಖಜಭೂಮಿ

(4) ಪಕ್ಷಿಪಾದ ಮುಖಜಭೂಮಿ

(ಉತ್ತರ:-1)

21. ಒಂದು ವೇಳೆ ಈ ಕೆಳಗಿನಂತಿದ್ದರೆ ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ಹಾಗೂ ಪ್ರಾಥಮಿಕ ಕೊರತೆಗಳು 2010-11ರಲ್ಲಿ ಸಮವಾಗಿರುತ್ತಿದ್ದವು

(1) ಪ್ರಮುಖ ಸಬ್ಸಿಡಿಗಳ ಮೇಲಿನ ರೆವಿನ್ಯೂ ಖರ್ಚು ಸೊನ್ನೆಯಾಗಿದ್ದರೆ

(2) ರಕ್ಷಣಾ ವೆಚ್ಚಗಳ ಮೇಲಿನ ರೆವಿನ್ಯೂ ಖರ್ಚು ಸೊನ್ನೆಯಾಗಿದ್ದರೆ

(3) ಸಾಲಗಳ ವಸೂಲಾತಿಯ ರೆವೆನ್ಯೂ ಖರ್ಚು ಸೊನ್ನೆಯಾಗಿದ್ದರೆ

(4) ಬಡ್ಡಿ ಸಂದಾಯಗಳ ಮೇಲಿನ ರೆವೆನ್ಯೂ ಖರ್ಚು ಸೊನ್ನೆಯಾಗಿದ್ದರೆ

(ಉತ್ತರ:-4)

22. ಈ ಕೆಳಕಂಡವುಗಳ ಕೋಢೀಕರಣ ಮತ್ತು ಏಕೀಕರಣವು ಪ್ರತ್ಯಕ್ಷ ತೆರಿಗೆಗಳ ಸಂಹಿತೆ ಮಸೂದೆ 2010ರ ಗುರಿಯಾಗಿದೆ

(1) ಎಲ್ಲಾ ಆದಾಯ ತೆರಿಗೆ ಕಾನೂನುಗಳು ಮತ್ತು 1957ರ ಆದಾಯ ತೆರಿಗೆ ಕಾಯಿದೆಯ ಬದಲಿಕೆ

(2) ಎಲ್ಲಾ ಸಂಪತ್ತು ತೆರಿಗೆ ಕಾನೂನುಗಳು ಮತ್ತು 1957ರ ಸಂಪತ್ತು ತೆರಿಗೆ ಕಾಯಿದೆಯ ಬದಲಿಕೆ

(3) ಎಲ್ಲಾ ಪ್ರತ್ಯಕ್ಷ ತೆರಿಗೆ ಕಾನೂನುಗಳು ಮತ್ತು ಒಂದೇ ಶಾಸನದೊಂದಿಗೆ 1961ರ ಆದಾಯ ತೆರಿಗೆ ಕಾಯಿದೆ ಹಾಗೂ 1957ರ ಸಂಪತ್ತು ತೆರಿಗೆ ಕಾಯಿದೆಗಳೆರಡನ್ನೂ ಬದಲಿಸುವುದು

(4) ಎಲ್ಲಾ ಪ್ರತ್ಯಕ್ಷ ತೆರಿಗೆ ಕಾನೂನುಗಳ ಮತ್ತು ಪ್ರತ್ಯೇಕ ಶಾಸನದೊಂದಿಗೆ 1961ರ ಆದಾಯ ತೆರಿಗೆ ಕಾಯಿದೆ ಹಾಗೂ 1957ರ ಸಂಪತ್ತು ತೆರಿಗೆ ಕಾಯಿದೆಗಳೆರಡನ್ನೂ ಬದಲಿಸುವುದು (ಉತ್ತರ:-3)

23. ಭಾರತದಲ್ಲಿ ಸಗಟು ಬೆಲೆ ಸೂಚಿಯಲ್ಲಿನ (WPI) ಆಹಾರದುಬ್ಬರವನ್ನು ಕೆಳಕಂಡಂತೆ ಮಾಪನ ಮಾಡಲಾಗುತ್ತದೆ

(1) ಪ್ರಾಥಮಿಕ ಆಹಾರ ವಸ್ತುಗಳನ್ನು ಒಳಗೊಂಡಿರುವ ಆಹಾರ ಸೂಚಿ

(2) ತಯಾರಾದ ಆಹಾರ ಉತ್ಪನ್ನಗಳ WPI

(3) ಪ್ರಾಥಮಿಕ ಸರಕು ವಸ್ತುಗಳ WPI

(4) ಪ್ರಾಥಮಿಕ ಆಹಾರ ವಸ್ತುಗಳು ಮತ್ತು ತಯಾರಿಕೆಯಾದ ಆಹಾರ ಉತ್ಪನ್ನಗಳನ್ನೊಳಗೊಂಡ ಆಹಾರ ಸೂಚಿ

(ಉತ್ತರ:-4)

24. ಈ ಕೆಳಕಂಡ ಬ್ಯಾಂಕುಗಳು, ಆದ್ಯತಾ ವಲಯಕ್ಕೆ ಬ್ಯಾಂಕ್ ಜಮೆಯ ಶೇ.32ನ್ನು ಸಾಲವಾಗಿ ನೀಡುವ ಗುರಿ ಹೊಂದಿವೆ

(1) ಸಾರ್ವಜನಿಕ ವಲಯ ಬ್ಯಾಂಕುಗಳು

(2) ಖಾಸಗಿ ವಲಯದ ಬ್ಯಾಂಕುಗಳು

(3) ಭಾರತದಲ್ಲಿ ಕಛೇರಿಗಳನ್ನು ಹೊಂದಿರುವ ವಿದೇಶಿ ಬ್ಯಾಂಕುಗಳು

(4) ದೇಶೀಯ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು

(ಉತ್ತರ:- 3)

25. ಭಾರತದ ಸಾರ್ವಭೌಮ ಕ್ರೆಡಿಟ್ ನಿರ್ಧಾರಣಕ್ಕಾಗಿ ಕ್ರೆಡಿಟ್ ಏಜನ್ಸಿಗಳು ಈ ಕೆಳಗಿನದನ್ನು ಒಳಗೊಂಡಿವೆ

(1) ಸ್ಟ್ಯಾಂಡರ್ಡ್ ಮತ್ತು ಪ್ಯೂರ್

(2) ರಾಷ್ಟ್ರೀಯ ಸ್ಟಾಕ್ ಎಕ್ಸ್ ಚೇಂಜ್

(3) S ಮತ್ತು P CNX ನಿಫ್ಟಿ

(4) ಬಾಂಬೆ ಸ್ಟಾಕ್ ಎಕ್ಸ್ ಚೇಂಜ್

(ಉತ್ತರ:-1)

26. BRIC ದೇಶಗಳೆಂದರೆ

(1) ಬಾಂಗ್ಲಾದೇಶ, ರಷ್ಯಾ, ಐರ್ಲೆಂಡ್ ಮತ್ತು ಕಾಂಗೋ

(2) ಬೆಲ್ಜಿಯಂ, ರುಮೇನಿಯಾ, ಇರಾನ್ ಮತ್ತು ಕೆನಡಾ

(3) ಬ್ರೆಜಿಲ್, ರಷ್ಯಾ, ಇಟಲಿ ಮತ್ತು ಚೀನಾ

(4) ಬ್ರೆಜಿಲ್, ರಷ್ಯಾ, ಭಾತರ ಮತ್ತು ಚೀನಾ

(ಉತ್ತರ:-4)

27. ವಿಮಾ ಭೇದನವು (Insurance penetration) ಈ ಕೆಳಕಂಡವುಗಳ ಅನುಪಾತವನ್ನು ಸೂಚಿಸುತ್ತದೆ

(1) ಒಂದು ಗೊತ್ತಾದ ವರ್ಷದಲ್ಲಿ ಹೊಣೆ ಒಪ್ಪಿಕೊಂಡ ಪ್ರೀಮಿಯಂಗೂ ಜಿ.ಡಿ.ಪಿ.ಗೂ ಇರುವ ಅನುಪಾತ

(2) ಒಂದು ಗೊತ್ತಾದ ವರ್ಷದಲ್ಲಿ ಹೊಣೆ ಒಪ್ಪಿಕೊಂಡ ಪ್ರೀಮಿಯಂಗೂ ಜನಸಂಖ್ಯೆಗೂ ಇರುವ ಅನುಪಾತ

(3) ಒಂದು ಗೊತ್ತಾದ ವರ್ಷದಲ್ಲಿ ಹೊಣೆ ಒಪ್ಪಿಕೊಂಡ ಜೀವವಿಮಾ ಪ್ರೀಮಿಯಂಗೂ ಆರೋಗ್ಯ ಹಾನಿ ಸಂಭವದ ಜನಸಂಖ್ಯೆಗೂ ಇರುವ ಅನುಪಾತ

(4) ಒಂದು ಗೊತ್ತಾದ ವರ್ಷದಲ್ಲಿ ಹೊಣೆ ಒಪ್ಪಿಕೊಂಡ ಜಿ.ಡಿ.ಪಿ. ವಿಮೆಯಲ್ಲದ ಪ್ರೀಮಿಯಂಗೂ ಸ್ವತ್ತುಗಳ ಒಟ್ಟು ಮೌಲ್ಯಕ್ಕೂ ಇರುವ ಅನುಪಾತ

(ಉತ್ತರ:-1)

28. ಭಾರತದ ಸಂದಾಯಗಳ ಬಾಕಿಯ ಚಾಲ್ತಿ ಲೆಕ್ಕವು ಈ ಕೆಳಕಂಡವನ್ನು ಒಳಗೊಳ್ಳುವುದಿಲ್ಲ

(1) ರಫ್ತುಗಳು ಮತ್ತು ಆಮದುಗಳು

(2) ನಾನ್-ಫ್ಯಾಕ್ಟರ್ ಸೇವೆಗಳು ಮತ್ತು ವರ್ಗಾವಣೆಗಳು

(3) ಫ್ಯಾಕ್ಟರ್ ಸೇವೆಗಳಿಂದ ವರಮಾನಗಳು

(4) ವಿದೇಶೀ ನೇರ ಹೂಡಿಕೆ

(ಉತ್ತರ:-4)

29. 2000-01 ರಿಂದಲೂ ಭಾರತದಿಂದಾಗುವ ಸೇವೆಗಳ ರಫ್ತಿನಲ್ಲಿ ಹೆಚ್ಚಿನ ಪಾಲು ಈ ಕೆಳಗಿನದಕ್ಕೆ ಸಂಬಂಧಿಸಿದೆ

(1) ವ್ಯವಹಾರ ಸೇವೆಗಳು

(2) ಹಣಕಾಸು ಸೇವೆಗಳು

(3) ಸಾಫ್ಟ್ ವೇರ್ ಸೇವೆಗಳು

(4) ಸಂವಹನ ಸೇವೆಗಳು

(ಉತ್ತರ:-3)

30. ಭಾರತದ ಚಿಲ್ಲರೆ ವ್ಯಾಪಾರದಲ್ಲಿನ FDI ಕುರಿತು 2012 ಜನವರಿ 10ರಲ್ಲಿರುವಂತೆ ಈ ಕೆಳಗಿನ ಯಾವ ವಿವರಣೆ ತಪ್ಪು

(1) ನಗದು ಕೊಟ್ಟು ಒಯ್ಯುವ ಸಗಟು ವ್ಯಾಪಾರದಲ್ಲಿನ FDI ಗೆ ಅನುಮತಿ ನೀಡಲಾಗಿದೆ

(2) ಒಂದೇ ಬ್ರಾಂಡಿನ ಚಿಲ್ಲರೆ ವ್ಯಾಪಾರದ FDI ಗೆ ಶೇ.100 ರವರೆಗೆ ಅವಕಾಶವಿದೆ

(3) ಅನೇಕ ಬ್ರಾಂಡಿನ ಚಿಲ್ಲರೆ ವ್ಯಾಪಾರದ FDI ನ್ನು ನಿಷೇಧಿಸಲಾಗಿದೆ

(4) ಒಂದೇ ಬ್ರಾಂಡ್ ಹಾಗೂ ಅನೇಕ ಬ್ರಾಂಡಿನ ಚಿಲ್ಲರೆ ಮಾರಾಟಗಳೆರಡರ FDI ಗೂ ಅವಕಾಶವಿದೆ

(ಉತ್ತರ:-3)

31. ಭಾರತ ಸರ್ಕಾರವು 2011 ರ ಫೆಬ್ರವರಿ 10 ರಂದು ವಿಧ್ಯುಕ್ತವಾಗಿ ಪ್ರಾರಂಭಿಸಿದ "ಸ್ವಾಭಿಮಾನ್" ಎಂಬುದು

(1) ಬಡತನದ ನಿರ್ಮೂಲನಕ್ಕಾಗಿ ಒಂದು ಸಾಮಾಜಿಕ ಸಮಾವೇಶದ ಕಾರ್ಯಕ್ರಮ

(2) ಶಾಲೆಯಿಂದ ಹೊರಗಿರುವ ಮಕ್ಕಳಿಗಾಗಿ ಒಂದು ಶೈಕ್ಷಣಿಕ ಸಮಾವೇಶನ ಕಾರ್ಯಕ್ರಮ

(3) ವಯಸ್ಸಾದ ಜನರಿಗಾಗಿ ಒಂದು ಸಾಮಾಜಿಕ ಕಲ್ಯಾಣ ಕಾರ್ಯಕ್ರಮ

(4) ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಶಾಖಾರಹಿತ ಬ್ಯಾಂಕ್ ಸೇವೆ ಒದಗಿಸುವುದಕ್ಕಾಗಿ ಒಂದು ಹಣಕಾಸು ಸಮಾವೇಶನ ಕಾರ್ಯಕ್ರಮ

(ಉತ್ತರ:-4)

32. 2001-2011 ರಲ್ಲಿ ಭಾರತದ ಜನಸಂಖ್ಯೆಯ ದಶಕದ ಬೆಳವಣಿಗೆ ದರವು

(1) 17.64

(2) 16.64

(3) 15.64

(4) 14.64

(ಉತ್ತರ:-1)

33. 2001 ಜನಗಣತಿ ಹಾಗೂ 2011 ಜನಗಣತಿಯಲ್ಲಿ ಶಿಶು ಲಿಂಗ ಅನುಪಾತ ಕುರಿತ ತೌಲನಿಕ ಅವಲೋಕನಗಳನ್ನು ಈ ಕೆಳಗೆ ಕೊಡಲಾಗಿದೆ

a. ಶಿಶು ಲಿಂಗ ಅನುಪಾತವು 927 ರಿಂದ 914 ಕ್ಕೆ ಇಳಿಮುಖವಾಗಿದೆ

b. ಜಮ್ಮು ಮತ್ತು ಕಾಶ್ಮೀರ ಹಾಗೂ ರಾಜಸ್ಥಾನಗಳಲ್ಲಿ ಈ ಇಳಿಮುಖತೆ ಗಣನೀಯವಾಗಿದೆ

c. ಪಂಜಾಬಿನಲ್ಲಿ ಲಿಂಗಾನುಪಾತ ಸುಧಾರಿಸಿದೆ

d. ಮಹಾರಾಷ್ಟ್ರದಲ್ಲಿ ಶಿಶು ಲಿಂಗಾನುಪಾತವು ಏರಿಕೆಯಾಗಿದೆ

ಮೇಲಿನ ಯಾವ ವಿವರಣೆಗಳು ಸರಿಯಾಗಿವೆ:

(1) A ಮಾತ್ರ (2) a, b, c (3) a, c, d (4) a ಮತ್ತು b

(ಉತ್ತರ:-2)

34. ಭಾರತದಲ್ಲಿ ಕೃಷಿ ಬೆಳವಣಿಗೆಯನ್ನು ಪ್ರವರ್ಧಿಸುವುದಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)ಯನ್ನು ಪ್ರಾರಂಭಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಕೆಳಕಂಡ ವಿವರಣೆಗಳನ್ನು ಪರಿಶೀಲಿಸಿ

a. ಯೋಜನೆಯನ್ನು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭಿಸಲಾಯಿತು

b. ಇದಕ್ಕೆ ನಿಧಿಗಳನ್ನು ಕೇಂದ್ರ ಸರ್ಕಾರವು 100% ಅನುದಾನ ರೂಪದಲ್ಲಿ ಒದಗಿಸುತ್ತದೆ

c. ಜಿಲ್ಲೆಗಳಿಗೆ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಂತೆ ನಿರ್ದೇಶಿಸುತ್ತದೆ

d. ಇದು ಕೃಷಿಯಲ್ಲಿ ಹೆಚ್ಚು ಹೂಡಿಕೆ ಮಾಡಲು ಉತ್ತೇಜಿಸುತ್ತದೆ

ಮೇಲಿನ ಯಾವ ವಿವರಣೆ ಸರಿಯಾಗಿದೆ:-

(1) a ಮತ್ತು b

(2) a, b ಮತ್ತು c

(3) b, c ಮತ್ತು d

(4) b ಮತ್ತು c

(ಉತ್ತರ:-3)

35. ನ್ಯಾಶನಲ್ ಕೌಂಟರ್ ಟೆರರಿಸಂ ಕೇಂದ್ರ (NCTC) ದ ಸ್ಥಾಪನೆಗೆ ಅನೇಕ ಮುಖ್ಯಮಂತ್ರಿಗಳು ವಿರೋಧ ವ್ಯಕ್ತಪಡಿಸಿದ್ದಾರೆ ಯಾಕೆಂದರೆ

a. ಇದು ಕಾನೂನು ಮತ್ತು ಸುವ್ಯವಸ್ಥೆ ಕುರಿತಂತೆ ರಾಜ್ಯದ ಅಧಿಕಾರವನ್ನು ಇಲ್ಲವಾಗಿಸುತ್ತದೆ

b. ರಾಜ್ಯಗಳಿಗೆ ಮಾಹಿತಿ ನೀಡದೆಯೇ ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳುವ ಹಾಗೂ ತನಿಖೆ ನಡೆಸುವ ಅಧಿಕಾರವನ್ನು ಪ್ರಸ್ತಾವಿತ NCTC ಗೆ ನೀಡಲಾಗಿದೆ

c. ಇದು ದೇಶದ ಒಕ್ಕೂಟ ರಚನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ

d. ಭಯೋತ್ಪಾದನೆಯ ವಿರುದ್ಧ ಹೋರಾಡುವುದಕ್ಕೆ ರಾಜ್ಯಕ್ಕಿರುವ ಎಲ್ಲ ಅಧಿಕಾರಗಳು ಕಸಿಯಲ್ಪಡುತ್ತವೆ

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ:

(1) a ಮತ್ತು d ಮಾತ್ರ

(2) c ಮತ್ತು d ಮಾತ್ರ

(3) a ಮತ್ತು c ಮಾತ್ರ

(4) b ಮತ್ತು c ಮಾತ್ರ

(ಉತ್ತರ:-4)

36. ಸಂಸತ್ತಿಗೆ ಅಪರಿಮಿತ ಅಧಿಕಾರಗಳನ್ನು ಕೊಡುವಂತೆ ಹಾಗೂ ತಿದ್ದುಪಡಿಗಳ ನ್ಯಾಯಿಕ ಪುನರಾವಲೋಕನವನ್ನು ನಿರಾಕರಿಸುವಂತೆ 368ನೇ ಅನುಚ್ಛೇದಕ್ಕೆ ಮಾಡಲಾದ ತಿದ್ದುಪಡಿಗಳನ್ನು, 1980ರಲ್ಲಿ ಸರ್ವೋಚ್ಚ ನ್ಯಾಯಾಲಯವು ಕಿತ್ತುಹಾಕಿತು. ಈ ಪ್ರಕರಣವು ಕೆಳಕಂಡ ಹೆಸರಿನಿಂದ ಜನಪ್ರಿಯವಾಗಿದೆ

(1) ಮಿನಿರ್ವ ಮಿಲ್ ಗಳ ಪ್ರಕರಣ

(2) ಕೇಶವಾನಂದ ಭಾರತಿ ಪ್ರಕರಣ

(3) ಗೋಲಕ್ ನಾಥ್ ಪ್ರಕರಣ

(4) ಬೊಮ್ಮಾಯಿ ಪ್ರಕರಣ

(ಉತ್ತರ:-1)

37. ಈ ಕಳಕಂಡ ತನಿಖೆ ನಡೆಸುವುದಕ್ಕಾಗಿ ಕರ್ನಾಟಕ ಸರ್ಕಾರವು ನ್ಯಾಯಮೂರ್ತಿ ಸೋಮಶೇಖರ ಸಮಿತಿಯನ್ನು ನೇಮಕ ಮಾಡಿತು

(1) ಚರ್ಚ್ ಗಳ ಮೇಲೆ ಆಕ್ರಮಣ

(2) ಭೂ ವಿಷಯದ ಡಿನೋಟಿಫಿಕೇಶನ್

(3) ಅಕ್ರಮ ಗಣಿಗಾರಿಕೆ ವಿಷಯ

(4) ಬಿ.ಪಿ.ಎಲ್.ಕಾರ್ಡುಗಳ ವಿತರಣೆಯ ಅಕ್ರಮಗಳ ಬಗ್ಗೆ

(ಉತ್ತರ:-1)

38. ರಾಜ್ಯ ನೀತಿಯ ನಿರ್ದೇಶಕ ತತ್ವಗಳಲ್ಲಿ ಕಲ್ಪಿಸಿಕೊಳ್ಳಲಾಗಿರುವ ಜೀವನೋಪಾಯದ ಹಕ್ಕು ಯಾವ ತತ್ವ ಆಧರಿಸಿದೆ

(1) ಸಮಾಜವಾದಿ ತತ್ವಗಳು

(2) ಗಾಂಧೀವಾದದ ತತ್ವಗಳು

(3) ಉದಾರ ತತ್ವಗಳು

(4) ಅರಾಜಕತಾ ತತ್ವಗಳು

(ಉತ್ತರ:-1)

39. ಈ ಕೆಳಗೆ ಕೊಟ್ಟಿರುವ ಎಲ್ಲ ವಿವರಣೆಗಳು ಸರಿಯಾಗಿವೆ. ಆದರೆ ಒಂದು ವಿವರಣೆ ಮಾತ್ರ ಭಾರತದಲ್ಲಿ ಎರಡು ಸದನಗಳ ವಿಧಾನಮಂಡಲವನ್ನು ಜಾರಿಗೊಳಿಸುವುದರಲ್ಲಿ ಅಡಗಿರುವ ನಿಜವಾದ ಭಾವವೇನೆಂಬದನ್ನು ಪ್ರತಿನಿಧಿಸುತ್ತದೆ. ಆ ವಿವರಣೆ ಯಾವುದು

(1) ರಾಜ್ಯಸಭೆಯ 1/3 ರಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ

(2) ಕಲೆ.ಸಾಹಿತ್ಯ, ಸಮಾಜಸೇವೆ ಮೊದಲಾದವುಗಳಲ್ಲಿ ಅಗ್ರಗಣ್ಯರಾದವರನ್ನು ನಾಮನಿರ್ದೇಶನ ಮಾಡಲು ಸರ್ಕಾರಕ್ಕೆ ಅಧಿಕಾರವಿರುತ್ತದೆ

(3) ಲೋಕಸಭೆಯು ಇಡಿಯಾಗಿ ಜನರ ಇಚ್ಛೆಯನ್ನು ಪ್ರತಿನಿಧಿಸಿದರೆ, ರಾಜ್ಯಸಭೆಯು ರಾಜ್ಯದ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ

(4) ಹಣದ ಮಸೂದೆಯನ್ನು ಪ್ರಾರಂಭಿಸುವ ಅಧಿಕಾರ ರಾಜ್ಯಸಭೆಗಿರುವುದಿಲ್ಲ

(ಉತ್ತರ:-3)

40. ಭಾರತದ ರಾಷ್ಟ್ರೀಯ ವರಮಾನದ ಕೆಳಕಂಡ ಯಾವ ಮಾಪನಗಳು 2010-11 ರಲ್ಲಿ ಅತ್ಯಂತ ಕಡಿಮೆ ಮೌಲ್ಯದ್ದಾಗಿದೆ

(1) ಮಾರುಕಟ್ಟೆ ಬೆಲೆಗಳಲ್ಲಿ ಜಿ.ಡಿ.ಪಿ

(2) ಫ್ಯಾಕ್ಟರ್ ವೆಚ್ಚ ಮತ್ತು ಚಾಲ್ತಿ ಬೆಲೆಗಳಲ್ಲಿ ಜಿ.ಡಿ.ಪಿ.

(3) ಫ್ಯಾಕ್ಟರ್ ವೆಚ್ಚ ಮತ್ತು ನಿಯತಾಂಕ ಬೆಲೆಗಳಲ್ಲಿ (2004-05) ಜಿ.ಡಿ.ಪಿ.

(4) ಮಾರುಕಟ್ಟೆ ಬೆಲೆಗಳಲ್ಲಿ ಎನ್.ಡಿ.ಪಿ.

(ಉತ್ತರ:-3)

41. ಭಾರತ ಕೇಂದ್ರ ಸಂಪುಟವು 2012ರ ಜನವರಿ 24ರಂದು ರಾಯಪುರದಲ್ಲಿರುವ ಮಾನಾ ವಿಮಾನ ನಿಲ್ದಾಣಕ್ಕೆ ------------ವಿಮಾನ ನಿಲ್ದಾಣ, ರಾಯಪುರ ಎಂದು ಮರು ನಾಮಕರಣ ಮಾಡಿತು

(1) ಸ್ವಾಮಿ ವಿವೇಕಾನಂದ

(2) ರಾಮಕೃಷ್ಣ ಪರಮಹಂಸ

(3) ಮಹಾತ್ಮ ಗಾಂಧಿ

(4) ಶಂಕರಿ ಪ್ರಸಾದ್ V ಭಾರತದ ಒಕ್ಕೂಟ ಪ್ರಕರಣದಲ್ಲಿ

(ಉತ್ತರ:-1)

42. ವಿಜ್ಞಾನಿಗಳು ಒಂದು ಹೊಸ ತಂತ್ರವಿಧಾನವನ್ನು ರೂಪಿಸಿದ್ದು, ಇದರ ಪ್ರಕಾರ ರಕ್ತದ ಕ್ಯಾನ್ಸರ್ ಇರುವ ರೋಗಿಗಳಿಗೆ ಅವರದೇ T ಕೋಶಗಳಿಂದ ಚಿಕಿತ್ಸೆ ಮಾಡಬಹುದಾಗಿದೆ. T ಕೋಶಗಳು ಒಂದು ವಿಧದ

(1) ಬಿಳಿ ರಕ್ತ ಕೋಶಗಳು

(2) ಕೆಂಪು ರಕ್ತ ಕೋಶಗಳು

(3) ಯಕೃತ್ ಕೋಶಗಳು

(4) ಕ್ಯಾನ್ಸರ್ ಉಳ್ಳ ಕೋಶ

(ಉತ್ತರ:-1)

43. ತಂತ್ರಜ್ಞಾನ ಪಾಲುದಾರಿಕೆ ಕುರಿತಾದ ಭಿನ್ನಾಭಿಪ್ರಾಯಗಳಿಂದಾಗಿ ಈ ಕೆಳಕಂಡ PSU ಸಾಲ ನೀಡುವ ಬ್ಯಾಂಕ್, ವ್ಯಾಪಾರ ಸ್ವಾಧೀನತೆ ಮಾಡುವುದಕ್ಕಾಗಿ ವಿಸಾ ಇಂಕ್ ಮತ್ತು ಇಲವಾನ್ ಇಂಕ್ ನೊಂದಿಗೆ ಜಂಟಿ ಉದ್ಯಮವನ್ನು ಸ್ಥಾಪಿಸಬೇಕೆಂದಿದ್ದ ತನ್ನ ಯೋಜನೆಯನ್ನು ಹಿಂತೆಗೆದುಕೊಂಡಿತು

(1) ಯೂನಿಯನ್ ಬ್ಯಾಂಕ್

(2) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

(3) ಸಿಂಡಿಕೇಟ್ ಬ್ಯಾಂಕ್

(4) ಕಾರ್ಪೊರೇಷನ್ ಬ್ಯಾಂಕ್

(ಉತ್ತರ:-2)

44. 2012ರ ಜನವರಿಯಲ್ಲಿ, ಯಾವ ಕಾರು 2012 ರ ಭಾರತೀಯ ಕಾರು ಎಂಬ ಕಿರೀಟವನ್ನು ಪಡೆದುಕೊಂಡಿತು

(1) ಟಯೊಟಾ ಇಟಿಯೊಸ್ ಲಿವಾ

(2) ಮಾರುತಿ ಸುಜುಕಿ ಸ್ವಿಫ್ಟ್

(3) ಹುಂಡೈ ವರ್ನಾ

(4) ಹುಂಡೈ ಇಯಾನ್

(ಉತ್ತರ:-2)

45. ಹುಲಿ ಸಂರಕ್ಷಣಾ ಕಾರ್ಯಕ್ರಮದಿಂದ ಹೊರತುಪಡಿಸಲಾದ ಕರ್ನಾಟಕದ ವನ್ಯಜೀವಿ ಧಾಮ ಯಾವುದು

(1) ಬಂಡೀಪುರ ರಾಷ್ಟ್ರೀಯ ಉದ್ಯಾನ

(2) ಅಂಶಿ ರಾಷ್ಟ್ರೀಯ ಉದ್ಯಾನ

(3) ನಾಗರಹೊಳೆ ರಾಷ್ಟ್ರೀಯ ಉದ್ಯಾನ

(4) ಭದ್ರಾ ವನ್ಯಜೀವಿ ಧಾಮ (ಉತ್ತರ:-3)

46. ತಾನು ಹಿಂದೆಂದೂ ಕಂಡಿರದಷ್ಟು ಬೃಹತ್ __________ ಕಂಡು ಹಿಡಿದಿರುವುದಾಗಿ 2011ರಲ್ಲಿ ನಾಸಾ ಘೋಷಿಸಿತು

(1) ನಕ್ಷತ್ರ

(2) ಗ್ರಹ

(3) ಕಪ್ಪುರಂಧ್ರ

(4) ಏಲಿಯನ್

(ಉತ್ತರ:-3)

47. Smart-e-Pants ಎಂದರೆ

(1) ಜೀವಾಧಾರಕ ಚಿಹ್ನೆಗಳ ನಿಗಾವಹಿಸುವ ಒಳ ಉಡುಪು ಮತ್ತು ಮೊಬೈಲ್ ಸಾಧನಕ್ಕೆ ಮಾಹಿತಿ ಒದಗಿಸುತ್ತದೆ

(2) ಮಕ್ಕಳ ಡೈಪರ್ ಗಳು ಬದಲಾಯಿಸುವುದು ಅಗತ್ಯವಾದಾಗ ಹೆತ್ತವರಿಗೆ ಸೂಚನೆ ಕೊಡುತ್ತದೆ

(3) ವಿಡಿಯೋ ಆಟದ ವ್ಯವಸ್ಥೆಗೆ ಜೋಡಿಸಲಾದ ಪ್ಯಾಂಟುಗಳು ಕೈ ನಿಯಂತ್ರಣದ ನೆರವಿಲ್ಲದೆ ಬಳಕೆದಾರರು ಆಡವನ್ನು ಆಡಬಹುದಾಗಿದೆ

(4) ಬೆನ್ನುಹುರಿ ಹಾನಿಗೊಳಗಾಗಿರುವಂತವರಿಗೆ ರೂಪಿಸಲಾದ ಎಲೆಕ್ಟ್ರಾನಿಕ್ ಕಿರುಷರಾಯಿಗಳು (Shorts)

(ಉತ್ತರ:-4)

48. ಜಾಗತಿಕ ಬಳಕೆದಾರರ ಆತ್ಮ ವಿಶ್ವಾಸ ಕುರಿತಂತೆ ನೀಲ್ಸನ್ ಸಮೀಕ್ಷೆಯ ಪ್ರಕಾರ ಸತತವಾಗಿ ಎಂಟನೇ ಚತುರ್ಥಾಂಶದಲ್ಲೂ (quarter) ಅತ್ಯಂತ ಆಶಾಮನೋಭಾವವನ್ನು ಹೊಂದಿಯೆ ಇರುವ ದೇಶ

(1) ಭಾರತ

(2) ಆಸ್ಟ್ರೇಲಿಯ

(3) ಜರ್ಮನಿ

(4) ಜಪಾನ್

(ಉತ್ತರ:-1)

49. ಹುಲಿ ಸಂರಕ್ಷಣೆಗಾಗಿ ಕರ್ನಾಟಕ ಸರ್ಕಾರದ ನೆರವನ್ನು ಕೋರಿರುವ ನೆರೆಯ ದೇಶ

(1) ಭೂತಾನ್

(2) ಮ್ಯಾನ್ಮರ್

(3) ಶ್ರೀಲಂಕಾ

(4) ಬಾಂಗ್ಲಾದೇಶ

(ಉತ್ತರ:-2)

50. ಕ್ಯಾನ್ಸರಿನ ಕಿಮೋಥೆರಪಿಯಲ್ಲಿ ಸೀಸಕ್ಕಿಂತ ಹೆಚ್ಚು ಪರಿಣಾಮಕಾರಿ ಎಂದು ಇತ್ತೀಚೆಗೆ ಕಂಡುಕೊಳ್ಳಲಾದ ಅಡ್ಡ ಪರಿಣಾಮಗಳು ಕಡಿಮೆಯಿರುವಂತಹ ಲೋಹ

(1) ಬೆಳ್ಳಿ

(2) ತಾಮ್ರ

(3) ಸತು

(4) ಸೆಲೆನಿಯಂ

(ಉತ್ತರ:-1)

51. ಯಾರೂ ನಿರೀಕ್ಷಿಸದಿದ್ದಂತಹ ನಿರ್ಧಾರವನ್ನು ಕೈಗೊಂಡು ಲಂಡನ್ನಿನಲ್ಲಿರುವ ಸೇಂಟ್ ಜೇಮ್ಸ್ ಅರಮನೆಯು 2011 ರಲ್ಲಿ ಕೆಳಕಂಡಂತೆ ಪ್ರಕಟಿಸಿತು

(1) ಎರಡು ವರ್ಷಗಳ ಕಾಲ ನವೀಕರಣಕ್ಕಾಗಿ ಸಂಪೂರ್ಣವಾಗಿ ಮುಚ್ಚಲಾಗುವುದು

(2) ಒಂದು ವಿಶೇಷ ಪ್ರೀಮಿಯಂ ಬೆಲೆ ನೀಡಿದರೆ ಪ್ರವಾಸಿಗಳಿಗೆ ರಾಣಿಯ ಖಾಸಗಿ ವಸತಿ ಭಾಗಗಳಿಗೆ ಪ್ರವೇಶ ನೀಡಲಾಗುವುದು

(3) ಅರಮನೆಯ ಒಂದು ಸೂರಿನ ಮೇಲೆ ಹೆಲಿಕಾಪ್ಟರ್ ಪಾಡನ್ನು ಸ್ಥಾಪಿಸಲಾಗುವುದು

(4) ಲಂಡನ್ ಒಲಂಪಿಕ್ಸ್ ಅವಧಿಯಲ್ಲಿ ಕೋಣೆಗಳನ್ನು ಬಾಡಿಗೆಗೆ ನೀಡಲಾಗುವುದು

(ಉತ್ತರ:-4)

52. ಕ್ರಿಸೊಟೈಲ್ ಅಸ್ ಬೆಸ್ಟೋಸ್ ಅನ್ನು ಹಾನಿಕಾರಕ ಪದಾರ್ಥಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ನಡೆದ ಅಂತರ ರಾಷ್ಟ್ರೀಯ ಪ್ರಯತ್ನಗಳಿಗೆ ಒಪ್ಪಿಗೆ ನೀಡಿದ ದೇಶ

(1) ಭಾರತ

(2) ಉಕ್ರೇನ್

(3) ಕಿರ್ಗೀಸ್ತಾನ್

(4) ಕೆನಡಾ

(ಉತ್ತರ:-1)

53. ಇತ್ತೀಚೆಗೆ ಮಿಣುಕಿನಷ್ಟು ಕಾಣಿಸಿಕೊಂಡ ಕೂಡಲೇ ಅಧ್ಯಕ್ಷತೆಗೇರುವ ಬಹುನಿರೀಕ್ಷಿತ ಯು.ಎಸ್. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯೊಬ್ಬರು ಮೊದಲಲ್ಲಿಯೇ  ಸ್ಪರ್ಧಾಕಣದಿಂದ ಹಿಂದೆ ಸರಿದರು, ಆತನ ಹೆಸರು

(1) ಜಾನ್ ಹಂಟ್ಸ್ ಮನ್

(2) ಮೈಕಲ್ ಬ್ಯಾಕ್ ಮನ್

(3) ಹರ್ಮನ್ ಕೇನ್

(4) ರಿಕ್ ಸ್ಯಾಂಟೋರಮ್

(ಉತ್ತರ:-2)

54. ನಮಗೆ ತಿಳಿದಿರುವಂತೆ ಭಾರತದಲ್ಲಿ ತೀರಾ ಉತ್ತರದಲ್ಲಿರುವ ಹರಪ್ಪ ವಸತಿ ಪ್ರದೇಶ ಯಾವುದು

(1) ಮಾಂಡು

(2) ಹರಪ್ಪ

(3) ಲೋಥಾಲ್

(4) ರೋಪರ್

(ಉತ್ತರ:-1)

55. 2012ರ ಆಸ್ಟ್ರೇಲಿಯ ಓಪನ್ ಅಂತಿಮ ಪಂದ್ಯದಲ್ಲಿ ಜಯಗಳಿಸುವ ಮೂಲಕ ತನ್ನ ಮೊದಲ ಗ್ರಾಂಡ್ ಸ್ಲಾಮ್ ಪ್ರಶಸ್ತಿಯನ್ನು ಪಡೆದ ಮಹಿಳಾ ಟೆನ್ನಿಸ್ ಪಟು ಯಾರು

(1) ವಿಕ್ಟೋರಿಯ ಅಜರೆಂಕಾ

(2) ಸ್ವೆಟ್ಲಾನ ಕುಜ್ನೆತ್ಸೋವ

(3) ಮರಿಯಾ ಶರಪೋವ

(4) ಕ್ಯಾರೊಲಿನ್ ವೊಜ್ನಿಯಾಕಿ

(ಉತ್ತರ:-1)

56. ಜಗತ್ತಿನ ಭವಿಷ್ಯದ ಶಕ್ತಿ ಶೃಂಗಸಭೆಯ ಐದನೇ ಅಧಿವೇಶನವು 2012 ಜನವರಿ 16 ರಿಂದ 19 ರವರೆಗೆ ಎಲ್ಲೆ ನಡೆಯಿತು

(1) ಅಬುದಾಬಿ

(2) ನವದೆಹಲಿ

(3) ಟೆಹ್ರಾನ್

(4) ಢಾಕಾ

(ಉತ್ತರ:-1)

57. ರಾಷ್ಟೀಯ ಸಂಸ್ಕೃತಿ ಸಂಸ್ಥಾನ ಮತ್ತು ಸಂಸ್ಕೃತ ಅಧ್ಯಯನದ ಅಂತರರಾಷ್ಟ್ರೀಯ ಸಂಘಗಳು 15ನೇ ವಿಶ್ವ ಸಂಸ್ಕೃತ ಭಾಷಾ ಸಮಾವೇಶವನ್ನು 2012 ರ ಜನವರಿ 5 ರಿಂದ 10 ರವರೆಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ಜಂಟಿಯಾಗಿ ನಡೆಸಿದವು. 14ನೇ ವಿಶ್ವ ಸಂಸ್ಕೃತ ಭಾಷಾ ಸಮಾವೇಶ ಎಲ್ಲಿ ನಡೆದಿತ್ತು

(1) ಕಿಯೊಟೊ, ಜಪಾನ್

(2) ಬೇಚಿಂಗ್, ಚೀನಾ

(3) ಕೊಲೊಂಬೊ, ಶ್ರೀಲಂಕಾ

(4) ಕೌಲಾಲಂಪುರ, ಮಲೇಶಿಯ

(ಉತ್ತರ:-1)

58. ಭಾರತದ ರಿಜಿಸ್ಟ್ರಾರ್ ಜನರಲ್ ರವರಿಂದ ಬಿಡುಗಡೆಯಾದ ಇತ್ತೀಚಿನ ಸ್ಯಾಂಪಲ್ ರಿಜಿಸ್ಟ್ರೇಶನ್ ಸಿಸ್ಟಮ್ ಬುಲೆಟಿನ್ ಡಿಸೆಂಬರ್ 2011ರ ಪ್ರಕಾರ, 2010ರ ಅವಧಿಯಲ್ಲಿ ಪ್ರತಿ 1000 ಜೀವಂತ ಜನನಗಳಿಗೆ ಶಿಶು ಮರಣ ಸಾಧ್ಯತಾ ದರವು ________ರಿಂದ________ ಶಿಶು ಮತಣಗಳಿಗೆ ಇನ್ನಷ್ಟು ಕಡಿಮೆಯಾಗಿದೆ ಎಂಬುದು ಕಂಡುಬಂದಿದೆ

(1) 50 ; 47

(2) 52 ; 49

(3) 53 ; 48

(4) 48 ; 47

(ಉತ್ತರ:-1)

59. 40 ವರ್ಷಗಳ ಅವಧಿಯಲ್ಲಿ 150 ದೇಶಗಳಿಗೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯ (UN-DESA) ದತ್ತಾಂಶದಿಂದ ತಿಳಿದು ಬರುವಂತೆ, 2000 ದ ಸಾಲಿನಲ್ಲಿ ಕೇವಲ ಯಾವ ಎರಡು ದೇಶಗಳಲ್ಲಿ ಹೆಣ್ಣು ಶಿಶು ಮರಣ ಸಾಧ್ಯತಾ ಪ್ರಮಾಣವು ಗಂಡು ಶಿಶು ಮರಣ ಸಾಧ್ಯತಾ ಪ್ರಮಾಣಕ್ಕಿಂತ ಹಿಚ್ಚಾಗಿದೆ

(1) ವೆನಿಜುವೆಲಾ ಮತ್ತು ಕಾಂಬೋಡಿಯ

(2) ನೈಜೀರಿಯ ಮತ್ತು ಘಾನ

(3) ಚೀನಾ ಮತ್ತು ಭಾರತ

(4) ಇಂಡೋನೇಶಿಯ ಮತ್ತು ಚೀನಾ

(ಉತ್ತರ:-3

60. SHADE ಎಂದರೇನು

(1) ಭಾರತ, ಜಪಾನ್ ಮತ್ತು ಚೀನಾದ ನೌಕಾಬಲಗಳ ನಡುವೆ ಆಗಿರುವ ಹೊಸ ಒಪ್ಪಂದ

(2) ಭಾರತ, ಜಪಾನ್ ಮತ್ತು ಚೀನಾದ ಸಶಸ್ತ್ರ ಬಲಗಳ ನಡುವೆ ಆಗಿರುವ ಹೊಸ ಒಪ್ಪಂದ

(3) ಭಾರತ, ಜಪಾನ್ ಮತ್ತು ರಷ್ಯಾದ ನೌಕಾ ಬಲಗಳ ನಡುವೆ ಆಗಿರುವ ಹೊಸ ಒಪ್ಪಂದ

(4) ಭಾರತ, ಜಪಾನ್ ಮತ್ತು ರಷ್ಯಾದ ಸಶಸ್ತ್ರ ಬಲಗಳ ನಡುವ ಆಗಿರುವ ಹೊಸ ಒಪ್ಪಂದ

(ಉತ್ತರ:-1)

61. "ದೇವನಾಂಪ್ರಿಯ" ಮತ್ತು "ಪ್ರಿಯದರ್ಶಿನಿ" ಎಂಬುದು ಈ ಕೆಳಕಂಡ ವ್ಯಕ್ತಿಯ ಇತರೆ ಹೆಸರುಗಳು

(1) ಹರ್ಷವರ್ಧನ

(2) ಮಹಾವೀರ

(3) ಗೌತಮ ಬುದ್ಧ

(4) ಅಶೋಕ

(ಉತ್ತರ:-4)

62. ಈ ಕೆಳಗಿನ ಯಾವ ಕ್ರಮಗಳನ್ನು ಜಾರಿಗೆ ತರುವ ಬಗ್ಗೆ ರೌಲತ್ ಕಾಯಿದೆ ಪ್ರಯತ್ನಿಸಿತು

a. ಪತ್ರಿಕೆಗಳ ಮೇಲೆ ಇನ್ನೂ ಹೆಚ್ಚಿನ ಹಾಗೂ ಕಟ್ಟುನಿಟ್ಟಿನ ನಿಯಂತ್ರಣ

b. ರಾಜಕೀಯ ಅಪರಾಧಿಗಳ ವಿಚಾರಣೆಯನ್ನು ನ್ಯಾಯವೇತ್ತರಿಲ್ಲದೆ (juries) ನ್ಯಾಯಾಧೀಶರೇ ನಡೆಸುವುದು

c. ವಿಧ್ವಂಸಕ ಗುರಿ ಹೊಂದಿದವರು ಎಂದು ಸಂದೇಹಿಸಲಾದ ವ್ಯಕ್ತಿಗಳನ್ನು ವಿಚಾರಣೆಯಿಲ್ಲದೆ ಸ್ಥಾನ ಬದ್ಧತೆಯಲ್ಲಿರಿಸುವುದು

d. ದೇಶದಾದ್ಯಂತ ಸೈನಿಕ ಕಾನೂನಿನ ಆಡಳಿತ

ಮೇಲಿನ ವಿವರಣೆಗಳಲ್ಲಿ ಸರಿಯಾದವು ಯಾವುವು

(1) a ಮತ್ತು b

(2) a, b ಮತ್ತು c

(3) b, c ಮತ್ತು d

(4) ಮೇಲಿನ ಎಲ್ಲವೂ

(ಉತ್ತರ:-2)

63. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವನ್ನು (1924) "ಯೂನಿಟಿ ಕಾಂಗ್ರೆಸ್" ಎಂದು ಕರೆಯಲಾಗಿದೆ ಕಾಂಗ್ರೆಸ್ ಅಧಿವೇಶನದ ಜೊತೆ ಜೊತೆಗೆ ನಡೆದ ಇತರ ಅಧಿವೇಶನ ಯಾವುದು

a. ಅಖಿಲ ಭಾರತ ಖಿಲಾಫತ್ ಸಮ್ಮೇಳನ

b. ಅಖಿಲ ಭಾರತ ಹಿಂದೂ ಮಹಾಸಭಾ

c. ಅಖಿಲ ಭಾರತ ಬ್ರಾಹ್ಮಣೇತರ ಸಮ್ಮೇಳನ

d. ಅಖಿಲ ಭಾರತ ಸಾಮಾಜಿಕ ಸಮ್ಮೇಳನ

ಸರಿಯಾದ ಉತ್ತರ:-

(1) a, b ಮತ್ತು d

(2) b,c ಮತ್ತು d

(3) a, c ಮತ್ತು d

(4) ಮೇಲಿನ ಎಲ್ಲವೂ

(ಉತ್ತರ:-4)

64. ಕರ್ನಾಟಕ ವೈಭವವು ಈ ಕೆಳಕಂಡ ಯಾವ ಪ್ರಭಾವಗಳನ್ನು ಬೀರಿತು

a. ಕನ್ನಡಿಗರಲ್ಲಿ ಸಾಂಸ್ಕೃತಿಕ ಒಗ್ಗಟ್ಟನ್ನು ಉಂಟುಮಾಡಿತು

b. ಅದು ಕರ್ನಾಟಕ ಸ್ವಾತಂತ್ರ ಹೋರಾಟಗಾರರಿಗೆ ಸ್ಪೂರ್ತಿ ನೀಡಿತು

c. ಅದು ಕನ್ನಡಿಗರಲ್ಲಿ ತಮ್ಮ ಗತವೈಭವದ ಬಗ್ಗೆ ಜಾಗೃತಿಯನ್ನು ಉಂಟುಮಾಡಿತು

ಸರಿಯಾದ ಉತ್ತರ:-

(1) a ಮತ್ತು c ಮಾತ್ರ

(2) a ಮತ್ತು b ಮಾತ್ರ

(3) b ಮತ್ತು c ಮಾತ್ರ

(4) ಮೇಲಿನ ಎಲ್ಲವೂ

(ಉತ್ತರ:-4)

65. ಕ್ರಿ.ಪೂ.ಏಳನೇ ಮತ್ತು ಐದನೇ ಶತಮಾನಗಳ ನಡುವಿನ ಅವಧಿಯಲ್ಲಿ ಈ ಕೆಳಕಂಡ ಯಾವ ಗಮನಾರ್ಹ ಬೆಳವಣಿಗೆಗಳು ನಡೆದವು

a. ಬೌದ್ಧಿಕ ಜೀವನ ಪ್ರಕ್ಷುಬ್ಧ ಸ್ಥಿತಿಯಲ್ಲಿತ್ತು

b. ಹಳೆಯ ಬುಡಕಟ್ಟು ರಚನೆ ಶಿಥಿಲವಾಗತೊಡಗಿತ್ತು

c. ಚಿಕ್ಕ ಚಿಕ್ಕ ಪ್ರಾದೇಶಿಕ ರಾಜ್ಯಗಳು ಕಣ್ಮರೆಯಾಗಿದ್ದವು

ಸರಿಯಾದ ಉತ್ತರ:-

(1) a ಮತ್ತು b

(2) b ಮತ್ತು c

(3) a ಮತ್ತು c

(4) ಮೇಲಿನ ಎಲ್ಲವೂ

(ಉತ್ತರ:-1)

66. ಭಾರತದ ರಾಷ್ಟ್ರೀಯ ಚಳುವಳಿಯ ಸಂವಿಧಾನಾತ್ಮಕ ಹಂತದ ಭಾಗವಾಗಿದ್ದ ಚಟುವಟಿಕೆಗಳು ಯಾವುವು

a. ಖಾದಿಯ ಪ್ರವರ್ಧನೆ

b. ಅಸಹಕಾರ ಚಳುವಳಿ

c. ಉಪ್ಪಿನ ಸತ್ಯಾಗ್ರಹ

d. ಅಸ್ಪೃಶ್ಯತೆಯ ವಿರುದ್ಧ ಹೋರಾಟ

ಸರಿಯಾದ ಉತ್ತರ:-

(1) a ಮತ್ತು b

(2) a ಮತ್ತು c

(3) b ಮತ್ತು d

(4) c ಮತ್ತು d

(ಉತ್ತರ:-1)

67. ಈ ಕೆಳಗಿನ ಯಾವ ಸಂಗತಿಗಳು ಆರ್ಯಭಟನಿಗೆ ತಿಳಿದಿದ್ದವು

a. ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ

b. ಸೂರ್ಯ ಮತ್ತು ಚಂದ್ರ ಗ್ರಹಣಕ್ಕೆ ಕಾರಣಗಳು

c. ನಕ್ಷತ್ರಗಳು ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತವೆ

d. ಗ್ರಹಗಳು ಸೂರ್ಯನ ಸುತ್ತ ದೀರ್ಘ ವೃತ್ತೀಯ ಪಥದಲ್ಲಿ ಚಲಿಸುತ್ತವೆ

ಮೇಲಿನ ವಿವರಣೆಗಳಲ್ಲಿ ಸರಿಯಾದವುಗಳು:-

(1) a, b ಮತ್ತು c

(2) b, c ಮತ್ತು d

(3) a, c ಮತ್ತು d

(4) a, b ಮತ್ತು d

(ಉತ್ತರ:-4)

68. ಇಲ್ಲಿ ಕೊಟ್ಟಿರುವ ಭೂಪಟದಲ್ಲಿ ಸಂಕೇತದೊಂದಿಗೆ ಬಾಣದಿಂದ ಗುರುತಿಸಲಾಗಿರುವ ಸಾಗರದ ಉಷ್ಣ ಮತ್ತು ಶೀತ ಪ್ರವಾಹಗಳ ಸರಿಯಾದ ಜೋಡಿಯನ್ನು ಗುರುತಿಸಿ:

(ವಿಶ್ವ ಭೂಪಟ ಕೊಟ್ಟಿರುತ್ತದೆ)

(1) a, b

(2) d,c

(3) ab,cd

(4) ad,bc

(ಉತ್ತರ:-4)

69. ಕೆಳಕಂಡ ವಿವರಣೆಗಳನ್ನು ಆಧರಿಸಿ ಅಗ್ನಿಶಿಲೆ, ಜಲಜಶಿಲೆ ಮತ್ತು ರೂಪಾಂತರಿ ಶಿಲೆಗಳ ಸರಿಯಾದ ಅನುಕ್ರಮಣಿಕೆಯನ್ನು ಗುರುತಿಸಿ

a. ಕೆಲವು ಶಿಲೆಗಳು ತುಲನಾತ್ಮಕವಾಗಿ ಮೆದುವಾಗಿದ್ದು, ಅವುಗಳನ್ನು ಕೆರೆದಾಗ ಪುಡಿ ಬರುತ್ತದೆ

b. ಅವು ದುಂಡಾದ ಕಣಗಳನ್ನು ಹೊಂದಿರುವುದಿಲ್ಲ ಆದರೆ ಅವು ಸ್ಫಟಿಕಗಳಿಂದ ಆಗಿರುತ್ತವೆ

c. ಹೆಚ್ಚೂ ಕಡಿಮೆ ಅಉ ಮೂಲ ಸ್ಥಾನದಲ್ಲಿಯೇ ಇರುತ್ತವೆ ಆದರೆ ಆಂತರಿಕ ಮತ್ತು ಹೊರಗಿನ ಬಲಗಳಿಂದಾಗಿ ಅವುಗಳ ಸ್ಥಾನ ಬದಲಾಗುತ್ತದೆ.

(1) a, b, c

(2) c, b, a

(3) b, a, c

(4) a, c, b

(ಉತ್ತರ:-3)

70. ಕೆಳಗಿನ ಪಟ್ಟಿ I ನ್ನು ಪಟ್ಟಿ II ರೊಂದಿಗೆ ಸರಿಹೊಂದಿಸಿ ಹಾಗೂ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

| ಪಟ್ಟಿ I (ಏಜೆಂಟ್) | ಪಟ್ಟಿ II (ಭೂ ರೂಪ) |
|---|---|
| A. ನದಿ | 1. ಇನ್ ಸೆಲ್ ಬರ್ಗ್ |
| B. ಹಿಮನದಿ | 2. ಸ್ವಾಭಾವಿಕ ಸೇತುವೆಗಳು |
| C. ಗಾಳಿ | 3. ಪ್ರಪಾತಗಳು |
| D. ಅಂತರ್ಜಲ | 4. ಕೂಂಬ್ ಬ್ರಿಡ್ಜ್ |
| E. ಕಡಲ ಅಲೆಗಳು | 5. ಮೆಕ್ಕಲು ಸೋಪಾನಗಳು |

ಸಂಕೇತಗಳು:

| | A | B | C | D | E |
|---|---|---|---|---|---|
| (1) | 5 | 3 | 2 | 4 | 1 |
| (2) | 5 | 4 | 1 | 2 | 3 |
| (3) | 5 | 3 | 2 | 1 | 4 |
| (4) | 2 | 1 | 3 | 4 | 5 |

(ಉತ್ತರ:-2)

71. ಕೆಳಗಿನ ವಿವರಣೆಗಳನ್ನು ಪರಿಶೀಲಿಸಿ:

a. ತೇವಭರಿತ ಉಷ್ಣವಲಯ ಸ್ಥಿತಿಗಳಲ್ಲಿ ಶಿಲೆಗಳ ಸವೆತದಿಂದ ಉಂಟಾದ ಕೆಂಪು ಶೇಷ ನಿಕ್ಷೇಪವನ್ನು ಈ ಮಣ್ಣು ಹೊಂದಿರುತ್ತದೆ

b. ಇದು ಮುಖ್ಯವಾಗಿ ಕಬ್ಬಿಣ ಹಾಗೂ ಅಲ್ಯೂಮಿನಿಯಂ ಆಕ್ಸೈಡ್ ಗಳನ್ನು ಹೊಂದಿರುತ್ತದೆ ಮತ್ತು ಹೆಚ್ಚು ಉಬ್ಬಿಲ್ಲದ ಸಮತಲ ಮೇಲ್ಮೈಗಳಲ್ಲಿ ಕಂಡುಬರುತ್ತದೆ.

ಇಲ್ಲಿ ಸೂಚಿಸಲಾಗಿರುವ ಮಣ್ಣು ಯಾವುದು

(1) ಕೆಂಪು ಮಣ್ಣು

(2) ಜಂಬಿಟ್ಟಿಗೆ ಮಣ್ಣು

(3) ಉಷ್ಣವಲಯದ ಕಪ್ಪು ಭೂಮಿ

(4) ಫಲವತ್ತಾದ ಕಪ್ಪು ಮಣ್ಣು

(ಉತ್ತರ:-2)

72. ಆಫ್ರಿಕಾದಲ್ಲಿ 20 ರಿಂದ 30 ಡಿಗ್ರಿ ಪೂರ್ವ ರೇಖಾಂಶಗಳ ನಡುವೆ ಉತ್ತರದಿಂದ ದಕ್ಷಿಣಕ್ಕೆ ಸಾಗಿ ಬಂದರೆ ನಿಮಗೆ ಕಂಡುಬರುವ ವಿಶಾಲವಾದ ಸ್ವಾಭಾವಿಕ ಸಸ್ಯಸಂಪತ್ತನ್ನು ಸರಿಯಾದ ಅನುಕ್ರಮದಲ್ಲಿ ತಿಳಿಸಿ

(1) ಸವನ್ನಾ-ಮರುಭೂಮಿ ಮಾದರಿ ಮಳೆಕಾಡುಗಳು-ಮೆಡಿಟರೇನಿಯನ್ ಮಾದರಿ-ಸವನ್ನಾ-ಮರುಭೂಮಿ

(2) ಮಳೆಕಾಡುಗಳು-ಸವನ್ನಾ-ಮರುಭೂಮಿ ಮಾದರಿ-ಮೆಡಿಟರೇನಿಯನ್ ಮಾದರಿ-ಸವನ್ನಾ-ಮರುಭೂಮಿ

(3) ಮೆಡಿಟರೇನಿಯನ್ ಮಾದರಿ-ಮಳೆಕಾಡುಗಳು-ಮರುಭೂಮಿ ಮಾದರಿ-ಸವನ್ನಾ-ಮರುಭೂಮಿ ಮಾದರಿ-ಮೆಡಿಟರೇನಿಯನ್ ಮಾದರಿ

(4) ಮರುಭೂಮಿ ಮಾದರಿ-ಸವನ್ನಾ-ಮಳೆಕಾಡುಗಳು-ಸವನ್ನಾ-ಮರುಭೂಮಿ ಮಾದರಿ-ಮೆಡಿಟರೇನಿಯನ್

(ಉತ್ತರ:-
4)

73. "The Grand Old Man of India" ಎಂದು ಕರೆಯಲ್ಪಡುತ್ತಿದ್ದವರು

(1) ಲಾಲಾ ಲಜಪತ್ ರಾಯ್

(2) ಬಾಲಗಂಗಾಧರ ತಿಲಕ್

(3) ಸುರೇಂದ್ರನಾಥ ಬೆನರ್ಜಿ

(4) ದಾದಾಬಾಯ್ ನವರೋಜಿ

(ಉತ್ತರ:-4)

74. ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿಯವರ ಆಶ್ರಮದ ಹೆಸರಿ

(1) ದಿ ಫೀನಿಕ್ಸ್ ಸೆಟ್ಲ್ ಮೆಂಟ್

(2) ಸರ್ವೋದಯ ಎನ್ಕ್ಲೇವ್

(3) ಯಂಗ್ ಇಂಡಿಯಾ

(4) ಅನ್ ಟು ದಿ ಲಾಸ್ಟ್

(ಉತ್ತರ:-1)

75. ಕೆಳಗಿನ ವಿವರಣೆಗಳನ್ನು ಓದಿ:

a. ಅಶೋಕನ ಬಹುತೇಕ ಶಾಸನಗಳು ಪ್ರಾಕೃತ ಭಾಷೆಯಲ್ಲಿದ್ದವು. ಆದರೆ ಉಪಖಂಡದ ವಾಯುವ್ಯ ಭಾಗದಲ್ಲಿರುವ ಶಾಸನಗಳು ಅರಮೇಯಿಕ್ ಮತ್ತು ಗ್ರೀಕ್ ಭಾಷೆಯಲ್ಲಿದ್ದವು

b. ಬಹುತೇಕ ಪ್ರಾಕೃತ ಶಾಸನಗಳನ್ನು ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗಿದೆ

c. ಅದರ ವಾಯುವ್ಯ ಭಾಗದಲ್ಲಿರುವ ಕೆಲವನ್ನು ಖರೋಷ್ಠಿ ಲಿಪಿಯಲ್ಲಿ ಬರೆಯಲಾಗಿದೆ

ಈ ಕೆಳಗಿನ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ:

(1) a ಮತ್ತು b ಸರಿ ಇವೆ

(2) a ಮಾತ್ರ ಸರಿ ಇದೆ

(3) b ಮತ್ತು c ಸರಿ ಇವೆ

(4) a, b ಮತ್ತು c ಸರಿ ಇವೆ

(ಉತ್ತರ:-4)

76. ಕೆಳಕಂಡ ವಿವರಣೆಗಳನ್ನು ಓದಿ:

ರೆವೆನ್ಯೂ ಉದ್ದೇಶಗಳಿಗಾಗಿ ಅಶೋಕ ಚಕ್ರವರ್ತಿಯು ಭೂಮಿಯನ್ನು ಕೆಳಕಂಡಂತೆ ವರ್ಗೀಕರಿಸಿದ್ದ:

a. ಪೊಲಾಜ್ ಎನ್ನುವುದು ಪ್ರತಿಯೊಂದು ಬೆಳೆಗಾಗಿ ಅನುಕ್ರಮವಾಗಿ ಬೇಸಾಯ ಮಾಡುತ್ತಿದ್ದ ಭೂಮಿಯಾಗಿದ್ದು ಅದನ್ನು ಎಂದೂ ಬೀಳು ಬಿಡುತ್ತಿರಲಿಲ್ಲ

b. ಪರೌತಿ ಎನ್ನುವುದು ಭೂಮಿಯು ತನ್ನ ಸತ್ವವನ್ನು ಮತ್ತೆ ಗಳಿಸಿಕೊಳ್ಳಲು ಅವಕಾಶ ಮಾಡಿಕೊಡುವುದಕ್ಕಾಗಿ ಸ್ವಲ್ಪ ಕಾಲದವರೆಗೆ ಯಾವುದೇ ಬೇಸಾಯ ಮಾಡದೆ ಬಿಟ್ಟಿರುತ್ತಿದ್ದಂತಹ ಭೂಮಿ

c. ಚಚಾರ್ ಎನ್ನುವುದು ಮೂರು ಅಥವಾ ನಾಲ್ಕು ವರ್ಷಗಳವರೆಗೆ ಬೀಳು ಬಿಟ್ಟಿರುತ್ತಿದ್ದಂತಹ ಭೂಮಿ

d. ಬಂಜಾರ್ ಎನ್ನುವುದು 5 ವರ್ಷ ಮತ್ತು ಅದಕ್ಕಿಂತ ಹೆಚ್ಚು ಕಾಲದವರೆಗೆ ಬೇಸಾಯ ಮಾಡದೆ

ಇರುತ್ತಿದ್ದಂತಹ ಭೂಮಿ

ಈ ಕೆಳಗಿನ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ:

(1) d ವಿವರಣೆ ಮಾತ್ರ ಸರಿಯಿದೆ

(2) a ಮತ್ತು b ವಿವರಣೆಗಳು ಸರಿಯಿವೆ

(3) a, c ಮತ್ತು d ವಿವರಣೆಗಳು ಸರಿಯಿವೆ

(4) ಮೇಲಿನ ಎಲ್ಲಾ ವಿವರಣೆಗಳು ಸರಿಯಿವೆ

(ಉತ್ತರ:-4)

77. 1857 ರಲ್ಲಿ ಭಾರತದ ವಿವಿಧ ಭಾಗಗಳ ನಾಯಕರು ಬ್ರಿಟಿಷರ ವಿರುದ್ಧ ಬಂಡೆದ್ದರು, ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗಿಲ್ಲ

(1) ಕನ್ವರ್ ಸಿಂಗ್ --- ಬಿಹಾರ್

(2) ನಾನಾಸಾಹಿಬ್ --- ನಾಗಪುರ್

(3) ಬಿರ್ಜಿಸ್ ಖದರ್ --- ಲಕ್ನೋ

(4) ಶಾ ಮಲ್ --- ಬಾರೋತ್

(ಉತ್ತರ:-2)

78. ಅರ್ಥಶಾಸ್ತ್ರಜ್ಞರ ಪ್ರಕಾರ ವಸಾಹತುಶಾಹಿ ಕಾಲದಲ್ಲಿ ಭಾರತದಲ್ಲಿ ಕೇವಲ ಎರಡು ನಗರಗಳು ಮಾತ್ರ ಸಮರ್ಪಕವಾದ ಕೈಗಾರಿಕಾ ನಗರಗಳಾಗಿದ್ದವು, ಅವುಗಳೆಂದರೆ

(1) ಕಲ್ಕತ್ತ ಮತ್ತು ಬಾಂಬೆ

(2) ಬಾಂಬೆ ಮತ್ತು ಮದ್ರಾಸ್

(3) ಜೆಮ್ ಶೆಡ್ ಪುರ ಮತ್ತು ಕಾನ್ಪುರ್

(4) ಜೆಮ್ ಶೆಡ್ ಪುರ ಮತ್ತು ಬಾಂಬೆ

(ಉತ್ತರ:-3)

79. ಬ್ರಿಟಿಷರ ವಿರುದ್ಧ ಸತ್ಯಾಗ್ರಹ ನಡೆಸುವುದಕ್ಕೆ ಮೊದಲು ಒಂದು ವರ್ಷಕಾಲ ಬ್ರಿಟಿಷ್ ಭಾರತದಲ್ಲಿ ಪ್ರವಾಸ ಮಾಡಿ ಬರುವಂತೆ ಗಾಂಧೀಜಿಯವರಿಗೆ ತಿಳಿಸಿದವರು ಯಾರು

(1) ಬಾಲ ಗಂಗಾಧರ ತಿಲಕ್

(2) ಮೊಹಮದ್ ಅಲಿ ಜಿನ್ನಾ

(3) ಗೋಪಾಲಕೃಷ್ಣ ಗೋಕಲೆ

(4) ಲಾಲಾ ಲಜಪತರಾಜ್ (ಉತ್ತರ:-3)

೮೦. ನೆಹರೂ ಅವರ ವರದಿಯನ್ನು ಹಿಂದೂ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದೆ ಎಂದು ಹೇಳಿದ ಎಂ.ಎ.ಜಿನ್ನಾ ಹದಿನಾಲ್ಕು ಅಂಶಗಳನ್ನು ಮುಂದಿಟ್ಟರು. ಈ ಕೆಳಗಿನ ಯಾವ ಅಂಶಗಳು ಅದರಲ್ಲಿ ಸೇರಿದ್ದವು

a. ದೆಹಲಿ ಪ್ರಸ್ತಾಪಗಳು

b. ಕಲ್ಕತ್ತಾ ತಿದ್ದುಪಡಿಗಳು

c. ಪ್ರತ್ಯೇಕ ಮತದಾರ ಮಂಡಳಿ

d. ಸರ್ಕಾರಿ ಸೇವೆಯಲ್ಲಿ ಮಿಸ್ಲಿಮರಿಗೆ ಮೀಸಲಾತಿ

ಇವುಗಳಲ್ಲಿ ಸರಿಯಾದ ಉತ್ತರಗಳು:

(1) a ಮತ್ತು b ಮಾತ್ರ

(2) c ಮತ್ತು d ಮಾತ್ರ

(3) a ಮತ್ತು d ಮಾತ್ರ

(4) ಮೇಲಿನ ಎಲ್ಲವೂ

(ಉತ್ತರ:-4)

81. ಭಾರತ ಮತ್ತು ಕರ್ನಾಟಕದ ಈಗಿನ ಮುಖ್ಯನ್ಯಾಯಮೂರ್ತಿಗಳು ಅನುಕ್ರಮವಾಗಿ (2012)

(1) ವಿಕ್ರಮ್ ಜಿತ್ ಸೇನ್ ಮತ್ತು ಎಸ್.ಹೆಚ್.ಕಪಾಡಿಯಾ

(2) ಎಸ್.ಹೆಚ್.ಕಪಾಡಿಯಾ ಮತ್ತು ವಿ.ಬಿ.ಸಬಾಹಿತ್

(3) ಎಸ್.ಹೆಚ್.ಕಪಾಡಿಯಾ ಮತ್ತು ವಿಕ್ರಮ್ ಜಿತ್ ಸೇನ್

(4) ಸೌಮಿತ್ರ ಸೇನ್ ಮತ್ತು ಜೆ.ಎಸ್.ಕೇಹರ್

(ಉತ್ತರ:-3)

82. 2011 ರಲ್ಲಿ ಆಫ್ರಿಕಾದ ಕೆಳಕಂಡ ದೇಶಗಳಲ್ಲಿ ಸರ್ವಾಧಿಕಾರ ಪ್ರಭುತ್ವವನ್ನು ಕೊನೆಗೊಳಿಸುವಲ್ಲಿ ಪ್ರಜಾಪ್ರಭುತ್ವ ಪರ ಬಲಗಳು ಮೊದಲು ಯಶಸ್ವಿಯಾದರು, ಅನಂತರ ಅದು ಕೆಳಕಂಡ ಅಡ್ಡಹೆಸರಿನೊಂದಿಗೆ ಅಂತಹುದೇ ಚಳುವಳಿಗಳು ನಡೆಯುವುದಕ್ಕೆ ಪ್ರೇರಕವಾಯಿತು. ಇವುಗಳನ್ನು ಅನುಕ್ರಮವಾಗಿ ತಿಳಿಸಿ

(1) ಲಿಬಿಯಾ, ಅರಬ್ ಸಮ್ಮರ್

(2) ಲಿಬಿಯಾ, ಅರಬ್ ಸ್ಪ್ರಿಂಗ್

(3) ಈಜಿಪ್ಟ್, ಅರಬ್ ಸಮ್ಮರ್

(4) ಈಜಿಪ್ಟ್, ಅರಬ್ ಸ್ಪ್ರಿಂಗ್

(ಉತ್ತರ:-4)

83. ಮಧ್ಯ ಪ್ರಾಚ್ಯದಲ್ಲಿರುವ ಈ ಕೆಳಕಂಡ ದೇಶವು 2012ರ ಜನವರಿ-ಫಬ್ರವರಿಯಲ್ಲಿ ತೀವ್ರತರವಾದ ಆಂತರಿಕ ರಾಜಕೀಯ ಮತ್ತು ಮಾನವತಾ ಸಂಬಂಧಿ ಸಮಸ್ಯೆಗಳನ್ನು ಎದುರಿಸಿತು ಇದು ವಿಶ್ವ ಸಂಸ್ಥೆಯ ನಿರ್ಣಯ ಕೈಗೊಳ್ಳುವುದಕ್ಕೂ ಕಾರಣವಾಯಿತು

(1) ಸೌದಿ ಅರೇಬಿಯ

(2) ಯೆಮೆನ್

(3) ಸಿರಿಯಾ

(4) ಇರಾಕ್

(ಉತ್ತರ:-3)

84. ಶ್ರೀನಿವಾಸ ರಾಮಾನುಜಮ್ ಅವರ _____ಆಚರಣೆಯ ಅಂಗವಾಗಿ 2012 ನೇ ವರ್ಷವನ್ನು ಗಣಿತಶಾಸ್ತ್ರದ ವರ್ಷ ಎಂದು ಘೋಷಿಸಲಾಗಿದೆ

(1) 75 ನೇ ಜನ್ಮದಿನೋತ್ಸವ

(2) 100 ನೇ ಜನ್ಮದಿನೋತ್ಸವ

(3) 125 ನೇ ಜನ್ಮದಿನೋತ್ಸವ

(4) 150 ನೇ ಜನ್ಮದಿನೋತ್ಸವ

(ಉತ್ತರ:-3)

85. ಸಮಾಜದಲ್ಲಿ ಕೆನೆಪದರವನ್ನು ವಿವರಿಸುವುದಕ್ಕಾಗಿ ಕನಿಷ್ಠ ಆದಾಯ ಮಟ್ಟವನ್ನು ಕರ್ನಾಟಕದಲ್ಲಿ ಇತ್ತೀಚೆಗೆ (2012 ರ ಫೆಬ್ರವರಿ) ಕೆಳಕಂಡಂತೆ ಏರಿಸಲಾಗಿದೆ

(1) 1 ಲಕ್ಷದಿಂದ 2 ಲಕ್ಷ ರೂ.ಗಳಿಗೆ

(2) 2 ಲಕ್ಷದಿಂದ 3.5 ಲಕ್ಷ ರೂ.ಗಳಿಗೆ

(3) 2 ಲಕ್ಷದಿಂದ 4 ಲಕ್ಷ ರೂ.ಗಳಿಗೆ

(4) 3 ಲಕ್ಷದಿಂದ 3.5 ಲಕ್ಷ ರೂ.ಗಳಿಗೆ

(ಉತ್ತರ:-2)

86. ಇತ್ತೀಚೆಗೆ ಚುನಾವಣಾ ಆಯೋಗವು ಪಕ್ಷದ ಸಂಕೇತವನ್ನು ಪ್ರತಿನಿಧಿಸುವ ಪ್ರತಿಮೆಗಳಿಗೆ ಮುಸುಕು ಹಾಕಿಸುವಂತೆ ಕೆಳಕಂಡ ರಾಜ್ಯದಲ್ಲಿ ಆದೇಶಿಸಿತು

(1) ಹಿಮಾಚಲ ಪ್ರದೇಶ

(2) ಜಾರ್ಖಂಡ್

(3) ಮಧ್ಯಪ್ರದೇಶ

(4) ಉತ್ತರಪ್ರದೇಶ

(ಉತ್ತರ:-4)

87. ಭಾರತದ ರಾಷ್ಟ್ರಗೀತೆ 'ಜನಗಣಮನ'ವನ್ನು ರಚಿಸಿದವರು ______ಮತ್ತು ಈಗ ಅದಕ್ಕೆ (2011ರಲ್ಲಿ)_____ವರ್ಷ ಆಗಿದೆ

(1) ಬಂಕಿಂಚಂದ್ರ ಚಟರ್ಜಿ, 100 ನೇ ವರ್ಷ

(2) ರವೀಂದ್ರನಾಥ ಠಾಗೂರ್, 100 ನೇ ವರ್ಷ

(3) ಬಂಕಿಂಚಂದ್ರ ಚಟರ್ಜಿ, 125ನೇ ವರ್ಷ

(4) ರವೀಂದ್ರನಾಥ ಟ್ಯಾಗೂರ್, 125 ನೇ ವರ್ಷ

(ಉತ್ತರ:-2)

88. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಅಧ್ಯಕ್ಷೀಯ ಚುನಾವಣೆಗಳನ್ನು_____ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ಈಗ ಆ ಚುನಾವಣೆಯನ್ನು _______ರಲ್ಲಿ ನಡೆಸಲು ನಿಗದಿಪಡಿಸಲಾಗಿದೆ.

(1) 5 ಹಾಗೂ ನವಂಬರ್ 2012

(2) 5 ಹಾಗೂ ನವಂಬರ್ 2013

(3) ೮ ಹಾಗೂ ನವಂಬರ್ 2012

(4) 4 ಹಾಗೂ ನವಂಬರ್ 2013

(ಉತ್ತರ:-3)

89. 2012ರ ಫೆಬ್ರವರಿಯಲ್ಲಿ ನಡೆದ ಪೊಲೀಸ್ ಬಂಡಾಯದಿಂದಾಗಿ, ಕೆಳಕಂಡ ದೇಶದ ಅಧ್ಯಕ್ಷರು ಸ್ಥಾನವನ್ನು ತ್ಯಜಿಸಿದರು

(1) ಮಾಲ್ಡೀವ್ಸ್

(2) ಲಕ್ಷದ್ವೀಪ

(3) ಉಗಾಂಡ

(4) ಫಿಲಿಪೈನ್ಸ್ (ಉತ್ತರ:-1)

ಕರುನಾಡು

**ನಿರ್ದೇಶನಗಳು:-**90 ಮತ್ತು 91 ನೇ ಪ್ರಶ್ನೆಗಳಲ್ಲಿ I ಮತ್ತು II ಎಂಬ ಎರಡು ವಿವರಣೆಗಳಿವೆ. ಸರಿಯಾದ ವಿವರಣೆಯನ್ನು ಗುರುತಿಸುವುದಕ್ಕಾಗಿ ಕೆಳಕಂಡ ಸಂಕೇತಗಳನ್ನು ಬಳಸಿ ಉತ್ತರಿಸಿ

**ಸಂಕೇತ:**

(1) ಎರಡೂ ವಿವರಣೆಗಳು ಸರಿ

(2) I ನೇ ವಿವರಣೆ ಮಾತ್ರ ಸರಿ

(3) II ನೆಯ ವಿವರಣೆ ಮಾತ್ರ ಸರಿ

(4) ಎರಡೂ ವಿವರಣೆಗಳು ತಪ್ಪು

90. I. ಭಾರತವು ಗೆಲುವು ಸಾಧಿಸಿದ 2011 ರ ವಿಶ್ವಕಪ್ ಕ್ರಿಕೆಟ್ ಅಂತಿಮ ಪಂದ್ಯವು ಕೊಲ್ಕತ್ತದಲ್ಲಿ ನಡೆಯಿತು

II. ವಿಶ್ವಕಪ್ ಕ್ರಿಕೆಟ್ ನ 2011 ರ ಪಂದ್ಯಗಳಲ್ಲಿ ಯುವರಾಜ್ ಸಿಂಗ್ ಅವರನ್ನು ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು

(ಉತ್ತರ:-3)

91. I. ಡೋ ಕೆಮಿಕಲ್ಸ್ ನವರು 2012ರ ಲಂಡನ್ ಒಲಂಪಿಕ್ಸ್ ಅನ್ನು ಪ್ರಾಯೋಜಿಸುವ ಬಗ್ಗೆ ಬಲವಾದ ಭಿನ್ನಮತವಿದೆ

II. 2011 ರ ಮಾರ್ಚ್ ನಲ್ಲಿ ಸಂಭವಿಸಿದ ಭೂಕಂಪನದಿಂದ ಜಪಾನಿನ ಫುಕುಶಿಮದಲ್ಲಿರುವ ಪರಮಾಡು ರಿಯಾಕ್ಟರ್ ಗೆ ತೀವ್ರವಾಗಿ ಹಾನಿ ಉಂಟಾಗಿದೆ

(ಉತ್ತರ:-1)

92. 10 ಕಿ.ಮೀ. ಹಾಂಗ್ ಕಾಂಗ್ ಸ್ಪರ್ಧೆಯಲ್ಲಿ ಓಡಿದ ಬ್ರಿಟಿಷ್-ಭಾರತೀಯ ಶತಾಯುಷಿ ಮ್ಯಾರಥಾನ್ ಓಟಗಾರ ಯಾರು

(1) ಮಿಲ್ಖಾ ಸಿಂಗ್

(2) ಸೂರ್ಯವೀರ್ ಸಿಂಗ್

(3) ಗಗನ್ ಸಿಂಗ್

(4) ಫೌಜಾ ಸಿಂಗ್

(ಉತ್ತರ:-4)

93. ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳ 'ಮಾನವ ಸಫಾರಿ'ಯಲ್ಲಿ ಅಧಿಕಾರಿಗಳು ಭಾಗಿಯಾಗಿರುವುದರಿಂದ ಕೆಳಕಂಡ ರಕ್ಷಿತ ಬುಡಕಟ್ಟುಗಳು ಶೋಷಣೆಯಾಗುತ್ತಿರುವುದು ಇತ್ತೀಚೆಗೆ ಬಹಿರಂಗಗೊಂಡಿದೆ

(1) ಸಂತಾಲ್

(2) ಮರಮ್

(3) ಜಾರವಾ

(4) ಲಂಬಾಣಿ (ಉತ್ತರ:-3)

94. ಕೆಳಕಂಡ ಮಾಧ್ಯಮ ಬಹುಮುಖೀ ಯುದ್ಧದ ವಿಮಾನಗಳನ್ನು ಕೊಳ್ಳುವುದಕ್ಕಾಗಿ ಭಾರತದ ರಕ್ಷಣಾ ಮಂತ್ರಾಲಯವು ಫ್ರಾನ್ಸ್ ನೊಂದಿಗೆ ವ್ಯಾಪಾರಿ ಒಪ್ಪಂದ ಮಾಡಿಕೊಂಡಿದೆ

(1) ರಫೇಲ್

(2) ಮಿಗ್

(3) ಯೂರೋಫೈಟರ್

(4) ಜಾಗ್ವಾರ್

(ಉತ್ತರ:-1)

95. ಇತ್ತೀಚೆಗೆ ನಿಧನರಾದ ಹಿರಿಯ ರಾಜತಂತ್ರಜ್ಞ ಹಾಗೂ ಲೇಖಕರ ಹೆಸರೇನು

(1) ಎಂ.ಎಲ್.ಸೋಂಧಿ

(2) ಎ.ಕೆ.ದಾಮೋದರನ್

(3) ಅಪ್ಪಾದುರೈ

(4) ಬ್ರಿಜೇಶ್ ಮಿಶ್ರ

(ಉತ್ತರ:-2)

96. ಇತ್ತೀಚೆಗೆ ಭಾರತದ ಸರ್ವೋಚ್ಛ ನ್ಯಾಯಾಲಯವು ______ರಷ್ಟು ಕಂಪನಿಗಳ ಪರವಾನಗಿಯನ್ನು 2G ಸ್ಪೆಕ್ಟ್ರಂ ವ್ಯವಹಾರದ ಅಡಿಯಲ್ಲಿ ಅಕ್ರಮ ಎಂದು ರದ್ದುಪಡಿಸಿತು

(1) 102

(2) 112

(3) 122

(4) 132

(ಉತ್ತರ:-3)

97. 2011 ರಲ್ಲಿ ಜ್ಞಾನಪೀಠ ಪುರಸ್ಕಾರ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಗಳಿಸಿದ ಕನ್ನಡದ ಇಬ್ಬರು ಲೇಖಕರು ಯಾರು

(1) ಡಾ. ಎಸ್.ಎಲ್.ಭೈರಪ್ಪ, ಡಾ.ಚಂದ್ರಶೇಖರ ಕಂಬಾರ

(2) ಡಾ.ಚಂದ್ರಶೇಖರ ಕಂಬಾರ , ಡಾ. ಎಸ್.ಎಲ್.ಭೈರಪ್ಪ

(3) ಡಾ.ಯು.ಆರ್.ಅನಂತಮೂರ್ತಿ, ಡಾ. ಎಸ್.ಎಲ್.ಭೈರಪ್ಪ

(4) ಡಾ.ಚಂದ್ರಶೇಖರ ಕಂಬಾರ, ಡಾ.ಚಿದಾನಂದ ಮೂರ್ತಿ

(ಉತ್ತರ:-2)

98. ಲೇಖಕ ಸಲ್ಮಾನ್ ರಶ್ದಿಯವರ ನಿಗದಿತ ಭಾಗವಹಿಸುವಿಕೆಯ ಬಗ್ಗೆ ಎದ್ದ ವಿವಾದದಿಂದಾಗಿ 2012 ರ ಜನವರಿಯಲ್ಲಿ ಭಾರತದ ಕೆಳಕಂಡ ನಗರದಲ್ಲಿ ನಡೆಸಲಾದ ಈ ಉತ್ಸವ ವಿಕೃತಗೊಂಡಿತು

(1) ಬಿಕನೇರ್

(2) ಉದಯ್ ಪುರ

(3) ಜೈಪುರ

(4) ಅಹಮದಾಬಾದ್

(ಉತ್ತರ:-3)

99. ಭಾರತ ಮತ್ತು ಬಾಂಗ್ಲಾದೇಶದ ಸರ್ಕಾರಗಳು ಈ ಕೆಳಕಂಡ ನದಿ ನೀರಿನ ಹಂಚಿಕೆಯ ಬಗ್ಗೆ ಕರಾರನ್ನು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿವೆ

(1) ಗಂಗಾ

(2) ಬ್ರಹ್ಮಪುತ್ರ

(3) ವಾರಣ

(4) ತೀಸ್ತಾ

(ಉತ್ತರ:-4)

100. ಭಾರತದಲ್ಲಿ ಈಗಿನ ಅಂತರ್ ಗಣತಿ ಅವಧಿ (ವರ್ಷಗಳಲ್ಲಿ) ಮತ್ತು ಮುಂದಿನ ಜನಗಣತಿ ನಡೆಯಲಿರುವ ವರ್ಷವನ್ನು ಅನುಕ್ರಮವಾಗಿ ತಿಳಿಸಿ

(1) 5, 2016

(2) 10, 2021

(3) 10, 2020

(4) 5, 2015

(ಉತ್ತರ:-2)

ಕರುನಾಡು ಎಗ್ಸಾಂ.ಇನ್